



ಕನ್ನಡ ಜನಪದ ಸಸ್ಯನಾಮಗಳು




ಶಾಂತಿ ನಾಯಕ











ಜನಪ್ರಿಯ ಜಾನಪದ ಪುಸ್ತಕ ಮಾಲೆ - ೬೧

ಕನ್ನಡ ಜನಪದ ಸಸ್ಯನಾಮಗಳು

ಶಾಂತಿ ನಾಯಕ

ಕರ್ನಾಟಕ ಜಾನಪದ ಪರಿಷತ್ತು
ನಂ.೧, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು-೫೬೧ ೦೫೪

Kannada Janapada Sasyanamagalu - A pen Portrait by **Shanti Nayaka** Published by **Karnataka Janapada Parishat,** #1, Jaladarshini Layout, Near M.S. Ramaiah Hospital Main Gate, New BEL Road, Bangalore - 560 054.
Phone: 080-23605033. Janapada Loka: 27201143

Pages: 44 Price: Rs.15 Year: 2011

ಪ್ರಥಮ ಮುದ್ರಣ : ೨೦೧೧
ಪ್ರತಿಗಳು : ೧೦೦೦
ಪುಟಗಳು : ೪೪
ಬೆಲೆ : ರೂ.೧೫ (ಹದಿನೈದು ರೂಪಾಯಿಗಳು)

ಮುದ್ರಕರು: 'ವರ್ಣ ಸಲ್ಯೂಷನ್ಸ್', ನಂ.15/1ಬಿ, "ಲಕ್ಷ್ಮಿನಿವಾಸ",
14ನೇ ಅಡ್ಡರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10,
ದೂ: 080-42123547/48, E-mail: vernasolutions@gmail.com

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜನಪ್ರಿಯ ಜಾನಪದ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು–ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಶ್ರೀಮತಿ ಶಾಂತಿನಾಯಕ** ಅವರು **'ಕನ್ನಡ ಜನಪದ ಸಸ್ಯನಾಮಗಳು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಜಿ.ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೧೦.೦೬.೨೦೧೧

ಕನ್ನಡ ಜನಪದ ಸಸ್ಯನಾಮಗಳು

ಜಗತ್ತಿನ ಜನಪದ ಸಸ್ಯನಾಮ ಕ್ಷೇತ್ರಕ್ಕೆ ಪ್ರಾಚೀನ ಇತಿಹಾಸವಿದೆ. ಕನ್ನಡ ಜನಪದ ಸಸ್ಯನಾಮ ಕ್ಷೇತ್ರಕ್ಕೂ ಈ ಮಾತು ಅನ್ವಯಿಸುತ್ತದೆ. ಪ್ರಾಚೀನ ಮನುಷ್ಯ ಜೀವಿ ತನ್ನ ಸುತ್ತಮುತ್ತಲಿನ ನಿಸರ್ಗದ ನಡುವೆ ಬಾಳುತ್ತ ಅದನ್ನು ಅನುಭವಿಸುತ್ತ ಅಲ್ಲಿಯ ಗಿಡಗಂಟಿ ಬಳ್ಳಿ ಬೇರುಗಳ ಬಗ್ಗೆ ವಿಶೇಷ ಜ್ಞಾನವನ್ನು ಸಂಪಾದಿಸಿದನು. ಪ್ರಾಚೀನ ಮಾನವ ಒಂದು ಎಲೆಯನ್ನು, ಒಂದು ಹಣ್ಣನ್ನು ಕಚ್ಚಿ ರುಚಿ ನೋಡಿದ; ಮುಟ್ಟಿ ಮೂಸಿದ ಸಂದರ್ಭದಲ್ಲಿಯೇ ಪ್ರಾಚೀನ ಸಸ್ಯನಾಮಗಳು ಹುಟ್ಟಿಕೊಂಡವು. ಒಂದಕ್ಕೆ ಇನ್ನೊಂದು ಸೇರಿತು. ಪ್ರಸಾರಗೊಂಡಿತು. ಆಗ ಹುಟ್ಟಿಕೊಂಡ ಗಿಡ ಮರಾದಿಗಳ ಹೆಸರುಗಳು ಜಾನಪದದ ಇತರ ಪ್ರಕಾರಗಳಲ್ಲಿ ನಡೆಯುವಂತೆ ಪ್ರಾರಂಭದಲ್ಲಿ ವ್ಯಷ್ಟಿ ನೆಲೆಯಲ್ಲಿ ಸೃಷ್ಟಿಗೊಂಡವು. ಕ್ರಮೇಣ ಅವು ಸಮಷ್ಟಿಯ ಸೊತ್ತಾಗಿ ಇಂದಿನವರೆಗೂ ಉಳಿದು ಕೊಂಡವು. ಇದು ಕನ್ನಡಾದಿ ಎಲ್ಲ ಭಾಷೆಗಳ ಜಾನಪದದಲ್ಲಿ ನಡೆದ; ನಡೆಯುವ ಪರಂಪರಾಗತ ಪ್ರಕ್ರಿಯೆ. ಆದರೆ ಅಂದು ಹುಟ್ಟಿದ ಆ ಹೆಸರುಗಳೆಲ್ಲವೂ ಇಂದಿಗೂ ಅವಿಚ್ಛಿನ್ನವಾಗಿ ಉಳಿದಿವೆ ಎಂದು ಹೇಳಲಾಗುವುದಿಲ್ಲ. ಹರಪ್ಪಾ ಮಹಂಜೋದಾರೊ ಸಂಸ್ಕೃತಿಯಲ್ಲಿ ಸ್ಥಾನವನ್ನು ಪಡೆದು ಅಲ್ಲಿ ದೊರೆತ ಮುದ್ರೆಗಳಲ್ಲಿ ತನ್ನ ರೂಪವನ್ನು ಕಾಣಿಸಿಕೊಂಡಿರುವ ಅಶ್ವತ್ಥದಂತಹ ಗಿಡಕ್ಕೆ ಅಂದು ಅಲ್ಲಿ ಯಾವ ಹೆಸರಿತ್ತು ಎಂಬುದನ್ನು ನಾವು ತಿಳಿಯದಾಗಿದ್ದೇವೆ. ಸಂಸ್ಕೃತ ಭಾಷಾ ಸಾಹಿತ್ಯದಲ್ಲಿ ಬರೆಯಲಾದ ಆ ದಿವ್ಯಶಕ್ತಿಯುಳ್ಳ ಸಂಜೀವಿನಿ ಹಾಗೂ ಸೋಮರಸಗಳ ಮೂಲಿಕೆ ಯಾವುದೆಂಬುದು ನಮಗೆ ಗೊತ್ತಿಲ್ಲ. ಸಂಸ್ಕೃತ

ಭಾಷಾ ಕಾವ್ಯ ಮತ್ತು ವೈದ್ಯಗ್ರಂಥಗಳಲ್ಲಿಯ ಸಸ್ಯನಾಮಗಳನ್ನಷ್ಟೇ ಅಲ್ಲ ಕನ್ನಡದ ಪ್ರಾಚೀನ ಕಾವ್ಯ ಹಾಗೂ ವೈದ್ಯ ಗ್ರಂಥಗಳಲ್ಲಿಯ ಅನೇಕ ಕನ್ನಡ ಸಸ್ಯನಾಮಗಳನ್ನು ಕೂಡ ಸಸ್ಯ ಪ್ರಪಂಚದಲ್ಲಿ ಗುರುತು ಹಿಡಿಯುವದು ಸುಲಭವಾಗಿಲ್ಲ. ಕಾಲಕ್ರಮದಲ್ಲಿ ಆಯಾ ಸಸ್ಯಗಳ ಬಳಕೆ ಹೆಚ್ಚಾದಂತೆ ಅವುಗಳ ಆಹಾರ, ವೈದ್ಯ ಹಾಗೂ ಇತರ ಮೌಲ್ಯಗಳ ಜ್ಞಾನ ಜನಕ್ಕೆ ತಿಳಿದು ಬಂದಂತೆ ಆಯಾ ಸಸ್ಯಕ್ಕೆ ಇನ್ನಷ್ಟು ಹೆಸರುಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆಯವರಿಂದ ಪ್ರತ್ಯೇಕವಾಗಿ ಸೃಷ್ಟಿಗೊಂಡು, ಪ್ರಸಾರ ಗೊಂಡಿವೆ. ಹೀಗಾಗಿ. ಪ್ರಾದೇಶಿಕವಾಗಿ ಒಂದೇ ಸಸ್ಯಕ್ಕೆ ವಿವಿಧ ಹೆಸರುಗಳು ರೂಢಿಗೆ ಬಂದಿವೆ. ಆದರೆ ಸಮಾಧಾನದ ಸಂಗತಿಯೆಂದರೆ ಸಾಮಾನ್ಯವಾಗಿ ಆಯಾ ಸಸ್ಯಗಳ ನಿಕಟ ಸಂಬಂಧದಲ್ಲಿರುವ ಜಾನಪದರ ನಡುವೆ ಆ ಸಸ್ಯಗಳಿಗೂ ಅವುಗಳ ಅವರು ಬಲ್ಲ ಹೆಸರುಗಳಿಗೂ ಸಹಜವಾಗಿ ಈಗಲೂ ಸಂಬಂಧ ಏರ್ಪಟ್ಟಿರುತ್ತದೆ. ಅಂದರೆ ಗುಡ್ಡ ಬೆಟ್ಟಗಳಲ್ಲಿ ಹೊಲ ಗದ್ದೆಗಳಲ್ಲಿ ಸದಾ ಸಸ್ಯಗಳ ನಿಕಟ ಸಂಬಂಧ ಹೊಂದಿರುವ ಜಾನಪದರು ಮೇಲೆ ತಿಳಿಸಿದಂತೆ ತಮ್ಮ ಪರಿಸರದ ಸಸ್ಯಗಳನ್ನು ತಮ್ಮ ಪರಿಸರ ಅಥವಾ ಪ್ರಾದೇಶಿಕ ಭಾಷೆಯಲ್ಲಿ ಗುರುತಿಸಲು ಶಕ್ಯರಾಗಿರುತ್ತಾರೆ. ಅಷ್ಟೇ ಅಲ್ಲ .ಅವುಗಳ ಗುಣಾವಗುಣಗಳ ಮಾಹಿತಿ ಅವರಿಗಿರುತ್ತದೆ. ಆದರೆ ಗ್ರಂಥಗಳಲ್ಲಿ ದಾಖಲಾದ ಅನೇಕ ಹೆಸರುಗಳಿಗೆ ಈ ನಡುವೆ ಕಂದಕವೇರ್ಪಟ್ಟು ತಕ್ಕ ವಾಹಕರಿಲ್ಲದ ಕಾರಣದಿಂದ ಆ ಹೆಸರುಗಳಿಗೆ ಸಂಬಂಧಪಟ್ಟ ಸಸ್ಯಗಳನ್ನು ಗುರುತಿಸುವುದು ಕಷ್ಟವಾಗುತ್ತಿದೆ. ಅಂದರೆ ಸಸ್ಯಗಳೊಂದಿಗೆ ನಿಕಟ ಸಂಬಂಧವಿಲ್ಲದವರ ಕೇವಲ ಪುಸ್ತಕ ಜ್ಞಾನವು ಆಯಾ ಹೆಸರಿಗೆ ಸಂಬಂಧಪಟ್ಟ ಸಸ್ಯವನ್ನು ಗುರುತಿಸಲು ಸಹಕಾರಿಯಾಗುವದಿಲ್ಲ. ತಮ್ಮನ್ನು ತೀವ್ರ ಸಸ್ಯ ಅಧ್ಯಯನಕ್ಕೊಳಪಡಿಸಿಕೊಂಡು ಕ್ಷೇತ್ರಕಾರ್ಯ ಕೈಗೊಳ್ಳುವ ಕೆಲವರಿಗೆ ಮಾತ್ರ ಇದು ಸಾಧ್ಯವಾಗಬಹುದು.

ಆದ್ದರಿಂದಲೇ ಇಂದಿಗೂ ಹಳೆಯ ಗ್ರಾಂಥಿಕ ಸಸ್ಯನಾಮಗಳನ್ನರಿಯಲು ಜನಪದ ಮೂಲಿಕಾ ತಜ್ಞರ ನೆರವು ಅಗತ್ಯವಾಗುವುದುಂಟು. ಆದರೆ ಈ ಅರಿವು ಅಲ್ಲಿಯ ಕೆಲವೇ ಜನರಲ್ಲಿ

ಗುಂಪಾಗಿರುವುದಿಲ್ಲ. ಕೆಲವರು ಸೊಪ್ಪಿನ ಗಿಡಗಳನ್ನು ಬಲ್ಲವರಾಗಿದ್ದರೆ ಕೆಲವರು ಮದ್ದಿನ ಗಿಡಗಳನ್ನು ಬಲ್ಲರು, ಇನ್ನು ಕೆಲವರು ಕೃಷಿಗೆ ಸಂಬಂಧಪಟ್ಟ ಗಿಡಗಂಟಿಗಳನ್ನು ಬಲ್ಲರು. ಆಸಕ್ತರು ಮಾತ್ರ ಇವೆಲ್ಲವನ್ನು ಒಟ್ಟಾಗಿ ಹೆಚ್ಚಿನ ಪ್ರಮಾಣದಲ್ಲಿ ತಮ್ಮದಾಗಿಸಿಕೊಂಡಿರುವುದುಂಟು.

ಗಿಡಮರ ಬಳ್ಳಿಗಳೊಂದಿಗೆ ನಿಕಟ ಸಂಬಂಧವುಳ್ಳವರ ಸಸ್ಯಜ್ಞಾನದ ಮೌಲ್ಯವನ್ನರಿತ ಪ್ರಾಚೀನ ಅಕ್ಷರವಂತರು ಇವುಗಳ ದಾಖಲೀಕರಣ ಮತ್ತು ಪರಿಷ್ಕರಣಕ್ಕೆ ತೊಡಗಿದರು. ಸ್ಥಳೀಯ ಜನಪದವೈದ್ಯಜ್ಞಾನಜನ್ಯ ವೈದ್ಯಪದ್ಧತಿಗಳು ಪರಿಷ್ಕರಣಗೊಂಡು ಅಕ್ಷರ ರೂಪಕ್ಕಿಳಿದವು. ಪರಂಪರಾಗತ ಜನಪದ ಜ್ಞಾನದಿಂದ ಆಯುರ್ವೇದ ಯುನಾನಿ, ತಿಬೇಟಿ, ಸಿದ್ಧ, ಮುಂತಾದ ವೈದ್ಯ ಪದ್ದತಿಗಳು ಜನ್ಮ ತಳೆದವು. ಬಳಿಕ ಕಾಲಾಂತರದಲ್ಲಿ ಇಲ್ಲಿ ದಾಖಲಾದ ಹೆಸರುಗಳು ಹಾಗೂ ಇಲ್ಲಿಯ ವೈದ್ಯ ಜ್ಞಾನ ಓದು ಬರಹ ಬಲ್ಲ ಜನತೆಯತ್ತ ಹರಿಯತೊಡಗಿತು. ಸ್ಥಳೀಯ ಹೆಸರುಗಳ ಬದಲಿಗೆ ಗ್ರಂಥದಲ್ಲಿ ದಾಖಲಾದ ಹೆಸರುಗಳು ಪ್ರಚಾರಕ್ಕೆ ಬರತೊಡಗಿದವು. ಹೀಗಾಗಿ ದೇಶಿ ಭಾಷೆಯ ಸಸ್ಯನಾಮಗಳ ಜೊತೆ ಗ್ರಂಥಗಳಲ್ಲಿಯ ಹೆಸರುಗಳು ಪೈಪೋಟಿ ನಡೆಸಿದವು.

ಭಾರತದಲ್ಲಿ ಜನಪದ ವೈದ್ಯ ಜ್ಞಾನವು ಚರಕ ಸುಶ್ರುತಾದಿಗಳ ಕಾಲದಿಂದಲೇ ಪರಿಷ್ಕರಣಗೊಂಡು ಆಯುರ್ವೇದವಾಗಿ ಪರಿಣಮಿಸುತ್ತಿದ್ದಾಗ ಭಾರತದ ಜನಪದ ವೈದ್ಯ ಜ್ಞಾನವು ಸಂಸ್ಕೃತ ಭಾಷೆಯಲ್ಲಿ ನಿರೂಪಿತವಾಯಿತು. ಆ ಕಾಲದಲ್ಲಿ ಒಂದು ಸಸ್ಯದ ಪರಿಚಯವನ್ನು ನಿಖರವಾಗಿ ತಿಳಿಸಲು ಈಗಿನಂತೆ ಛಾಯಾಚಿತ್ರ ಸೌಕರ್ಯವಾಗಲಿ, ಆಧುನಿಕ ಸಸ್ಯಶಾಸ್ತ್ರೀಯ ಹೆಸರಿನ ಪರಿಕಲ್ಪನೆಯಾಗಲಿ ಇದ್ದಿರಲಿಲ್ಲ. ಆದ್ದರಿಂದ ಈ ಗ್ರಂಥ ರಚನಾಕಾರರಿಗೆ ಒಂದು ಸಸ್ಯವನ್ನು ಪರಿಚಯಿಸಲು ಹಲವು ವಿಧದಲ್ಲಿ ವರ್ಣಿಸಿ ಹೇಳಬೇಕಾದದ್ದು ಅನಿವಾರ್ಯವಾಯಿತು. ಆದ್ದರಿಂದ ಆಗ ಅವರು ಆಯಾ ಗಿಡಕ್ಕೆ ಆಗ ಸಂಸ್ಕೃತ ಬಲ್ಲವರ ನಡುವೆ ಜಾರಿಯಲ್ಲಿದ್ದಿರಬಹುದಾದ ಅಥವಾ ಕಾಲಾಂತರದಲ್ಲಿ ಸಂಸ್ಕೃತ ಭಾಷಿಕರು ಸ್ಥಳೀಯ

ಭಾಷೆಯ ಸಸ್ಯನಾಮಗಳನ್ನು ಭಾಷಾಂತರವಾದಿಗಳ ಮೂಲಕ ಪರಿವರ್ತಿಸಿಕೊಂಡ ಸಂಸ್ಕೃತ ಹೆಸರುಗಳ ಜೊತೆಗೆ ಅವುಗಳ ಗುಣ, ವರ್ಣ, ಆಕಾರಾದಿಗಳನ್ನು ವರ್ಣಿಸುವಂತಹ ಇತರ ಹೆಸರುಗಳನ್ನು ಸೇರಿಸಿಕೊಂಡರು. ಆಯುರ್ವೇದವೆಂದು ನಾವು ಗುರುತಿಸುವ ಗ್ರಂಥಗಳ ಕರ್ತೃಗಳು, ಪ್ರಾದೇಶಿಕ ಜನಪದ ವೈದ್ಯ ಜ್ಞಾನವು ಗೋವಳಿಗರು ಕುರಿಗಾಹಿಗಳು ಮುಂತಾದವರ ಬಳಿ ಸಾಕಷ್ಟಿರುತ್ತದೆ ಎಂದು ಅರಿತವರಾಗಿದ್ದರು. ಆದರೆ ಆಗಿನ ಜನಪದ ವೈದ್ಯ ಜ್ಞಾನಿಗಳ ಸ್ಥಳೀಯ ಭಾಷೆ ಯಾವುದಾಗಿತ್ತೆಂಬುದು ಆಯುರ್ವೇದ ಕರ್ತಾರರ ಗ್ರಂಥಗಳಿಂದ ತಿಳಿದು ಬರುವದಿಲ್ಲ. ಒಂದುವೇಳೆ ಕುರಿಗಾಹಿಗಳ ಮತ್ತು ಗೋವಳರರೆಂದು ಹೇಳಲಾದ ಜನಪದವೈದ್ಯರ ಭಾಷೆ ಸ್ಥಳೀಯವಾಗಿದ್ದು ಸಂಸ್ಕೃತೇತರವಾಗಿರುವ ಸಾಧ್ಯತೆಯಿರುವದಾದರೂ ಗ್ರಂಥಕರ್ತರು ಜನಪದ ವೈದ್ಯ ಜ್ಞಾನವನ್ನು ನೇರವಾಗಿ ಆಯಾ ಪ್ರಾದೇಶಿಕ ಸಸ್ಯನಾಮದೊಂದಿಗೆ ದಾಖಲಿಸಿರುವುದು ಕಂಡುಬರುವದಿಲ್ಲ. ಈ ದಿಸೆಯಲ್ಲಿ ಪ್ರಯತ್ನ ಮಾಡದಿರುವ ಕಾರಣದಿಂದಲೂ ಸಸ್ಯಗಳ ವಿಶೇಷ ವರ್ಣನೆಯ ಅವಶ್ಯಕತೆ ಈ ಗ್ರಂಥ ಕರ್ತೃರಿಗೆ ಹೆಚ್ಚಿಗೆ ಉಂಟಾಯಿತು. ಉದಾಹರಣೆಗೆ ಜಲಬ್ರಾಹ್ಮಿಯೆಂಬ ಸಸ್ಯವನ್ನು ಎತ್ತಿಕೊಳ್ಳೋಣ ಬಕೊಪಾ ಮೊನ್ನೆರಿ ಎಂಬ ಆಧುನಿಕ ಸಸ್ಯಶಾಸ್ತ್ರೀಯ ಹೆಸರುಳ್ಳ ಈ ಸಸ್ಯವು ಸಂಸ್ಕೃತ ಭಾಷಿಕರು ಹಾಗೂ ಅವರ ಪ್ರಭಾವದಿಂದಾಗಿ ಕನ್ನಡಿಗರು ಹೆಸರಿಸುವ ಬ್ರಾಹ್ಮಿ ಎಂಬ ಸಸ್ಯವಲ್ಲ. ಈ ಬ್ರಾಹ್ಮಿಯು – ಸೆಂಟೆಲ್ಲಾ ಏಸಿಯಾಟಿಕ – ಕನ್ನಡಲ್ಲಿ ಉರಗೆ, ಒಂದೆಲಗ ಎಂಬ ಕನ್ನಡ ಹೆಸರಿನೊಂದಿಗೆ ಗುರುತಿಸಲ್ಪಡುತ್ತದೆ. ಬ್ರಾಹ್ಮಿ ಮತ್ತು ಜಲಬ್ರಾಹ್ಮಿಗಳ ವ್ಯತ್ಯಾಸವನ್ನು ತಿಳಿಸುವ ಸಲುವಾಗಿ ಪ್ರಾಚೀನ ಆಯುರ್ವೇದ ರಚನಾಕಾರರು ಜಲಬ್ರಾಹ್ಮಿಯ ವರ್ಣನಾತ್ಮಕವಾದ ಇತರ ಹೆಸರುಗಳ ಜೊತೆ "ಬಹುಫೇನ" ಎಂಬ ಹೆಸರನ್ನು ಕಾಣಿಸಿದರು. ಅರೆದಾಗ ನೊರೆ–ಬುರುಗು ಸೂಸುವ ಗುಣ ಜಲಬ್ರಾಹ್ಮಿಗಿದೆ. ಆದರೆ ಬ್ರಾಹ್ಮಿ ಹೆಸರಿನ ಉರಗೆ–ಒಂದೆಲಗಕ್ಕೆ ಈ ಗುಣ ಇಲ್ಲ. ಬಹುಫೇನ ಎಂಬ ಈ ವರ್ಣನಾತ್ಮಕ ಹೆಸರಿನಲ್ಲಿರುವ ಗುಣವು ಜಲಬ್ರಾಹ್ಮಿಯನ್ನು ಗುರುತಿಸಲು ಸಾಧ್ಯವಾಯಿತು. ಜೊತೆಗೆ ಇದರ

ಪರಿಚಯವು ಕೆಲವು ನಾಡವೈದ್ಯರಿಗಿದ್ದ ಕಾರಣ ಎರಡು ಬ್ರಾಹ್ಮಿಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಹಾಯವಾಯಿತು. ಉರಗೆಯನ್ನು ವರ್ಣಿಸುವಾಗ ಅದನ್ನು ಮಂಡೂಕಪರ್ಣಿ ಎಂದು ಕರೆದರು. ಆದರೆ ಇದರ ಎಲೆ ಮಂಡೂಕದಂತಿಲ್ಲ. ಆದರೆ ಇದಕ್ಕೆ ಮಂಡೂಕದಂತೆ ಜಿಗಿಯುವ ನಡೆಯಿದೆ. ಹೀಗೆ ಜಿಗಿಯುವ ಗುಣವು ಇತರ ಅನೇಕ ಸಸ್ಯಗಳಿಗೂ ಇದೆ. ಹೀಗಾಗಿ ಈ ಹೆಸರುಗಳು ಸಸ್ಯವನ್ನು ಗುರುತಿಸುವಲ್ಲಿ ನಿಖರತೆಯನ್ನು ತರುವುದಿಲ್ಲ. ಉರಗೆ, ಒಂದೆಲೆ ಎಂಬ ಅನುಕ್ರಮವಾಗಿ ಕನ್ನಡದ ರೂಢ ಮತ್ತು ಅನ್ವರ್ಥಕನಾಮಗಳು ಆಯಾ ಪ್ರದೇಶದಲ್ಲಿ ಆ ಸಸ್ಯಗಳನ್ನು ನಿಖರವಾಗಿ ತಿಳಿಸಲು ಸಹಾಯ ಮಾಡುತ್ತವೆ. ಅಂದರೆ ಈ ಹೆಸರುಗಳು ಒಂದು ಪ್ರದೇಶಕ್ಕೆ ಮಾತ್ರ ಸೀಮಿತವಾಗುಳಿದು ಅಲ್ಲಿಯವರ ಗಿಡವನ್ನು ಗುರುತಿಸುವ ಬೇಡಿಕೆಯನ್ನು ಪೂರೈಸಲು ಮಾತ್ರ ನೆರವಾಗುತ್ತವೆ. ಇವು ಹೆಚ್ಚು ಪ್ರಚಾರಗೊಂಡಾಗ ನೆಲನೆಲ್ಲಿಯಂತೆ ಕನ್ನಡ ನಾಡಿನ ತುಂಬ ಪರಿಚಿತವಾಗಬಹುದು. ಹೆಚ್ಚು ಪ್ರಸಿದ್ಧವಾದ ಗಿಡವೊಂದು ಭಾಷೆಯ ಗಡಿಯನ್ನು ಮೀರಿ ತನ್ನ ಭಾಷೆಯ ನಾಡಿನ ಹೊರಗೂ ಪ್ರಸಾರವಾಗಬಹುದು. ಆಗ ಅದಕ್ಕೆ ಒಂದೇ ಒಂದು ಹೆಸರು ಸಾಕಾಗುತ್ತದೆ. [ಪಾಲಕ್‌ಸೊಪ್ಪು ಇದು ಸೊಪ್ಪು ಎಂಬ ಕನ್ನಡ ಬಟ್ಟೆ ಧರಿಸಿ ಅಥವಾ ಬತ್ತಲೆಯಾಗಿ ಕನ್ನಡವೇ ಆಗಿದೆ. ಸ್ಟಿವಿಯಾ ಇನ್ಸುಲಿನ್‌ಗಳು ಇಲ್ಲಿ ತಮ್ಮ ಹೊಸ ಹೆಸರಿನೊಂದಿಗೆ ಸುಲಭವಾಗಿ ಕನ್ನಡನಾಡಿನಲ್ಲಿ ಗುರುತಿಸಲ್ಪಟ್ಟಿವೆ.] ಇಂಗುತೆಂಗುಗಳು ಎಲ್ಲಿಂದಲೋ ಬಂದು ಬಹುಹಿಂದೆಯೇ ಕನ್ನಡವಾಗಿವೆ. ಅಂದರೆ ಒಂದು ಹೆಸರಿನ ಜೀವಂತಿಕೆಗೆ ಅದರೊಂದಿಗಿನ ಜನರ ನಿಕಟ ಸಂಬಂಧದ ಅವಶ್ಯಕತೆಯಿದೆಯೆಂಬುದನ್ನು ಈ ಮೇಲಿನ ಸಂಗತಿಗಳು ಧೃಡ ಪಡಿಸುತ್ತವೆ.

೧. ಆಯುರ್ವೇದವು ಸ್ಥಳೀಯ, ಸಂಸ್ಕೃತವಲ್ಲದ ಪ್ರಾದೇಶಿಕ, ಸಸ್ಯನಾಮಗಳನ್ನು ದಾಖಲಿಸಲು ನಿರಾಕರಿಸಿದರೂ ಕೂಡ ದ್ರಾವಿಡ ಭಾಷಾ ಪ್ರದೇಶಗಳಲ್ಲಿ ಇವು ಇದುವರೆಗೂ ಜೀವಂತವಾಗಿವೆ. ಕರ್ನಾಟಕದಲ್ಲಂತೂ ಕನ್ನಡ ಭಾಷಾ ಸಸ್ಯನಾಮಗಳು ಹೇರಳವಾಗಿ

ದೊರೆಯುತ್ತವೆ. ನಾಡವೈದ್ಯರಷ್ಟೇ ಅಲ್ಲ ಜನಸಾಮಾನ್ಯರು ಬಲ್ಲ ಕನ್ನಡ ಸಾಮಾನ್ಯ ಸಸ್ಯನಾಮಗಳು ಮತ್ತು ಅಪಾರ ಸಂಖ್ಯೆಯ ಕನ್ನಡ ಔಷಧ ಸಸ್ಯನಾಮಗಳು ನಮ್ಮ ಜನಪದ ಶಬ್ದಕಣಜವನ್ನು ಜೊತೆಗೆ ಕನ್ನಡ ಶಬ್ದ ಬಂಡಾರವನ್ನು ತುಂಬಬಲ್ಲವು. ಈ ಸಸ್ಯನಾಮಗಳು ಒಂಟಿಯಾಗಿರುವದು ಅಪರೂಪ. ಒಂದೊಂದು ಗಿಡಮರಬಳ್ಳಿಯ ಹೆಸರಿಗೆ ನೂರಾರು ಪ್ರಾದೇಶಿಕ ಹೆಸರುಗಳು ಸೇರಿ ಸಂಖ್ಯೆ ಹಲವು ಪಟ್ಟಾಗುತ್ತದೆ. ಕಫನಾಶಕ ಬದೀಗೆಂಡೆ, ಮಹಿಳೆಯರ ಲೈಂಗಿಕ ರೋಗ ನಿವಾರಣೆ ಮಾಡಿ ಅವರ ಅಶಕ್ತತೆಯನ್ನು ದೂರ ಮಾಡಬಲ್ಲ ತಂಡ್ಬಳ್ಳಿ, ಸತ್ವ ಭರಿತ ಕಾಕಿ ಸೊಪ್ಪು, ಜೀರ್ಣ ಕ್ರಿಯೆಯಲ್ಲಿ ನೆರವಾಗಬಲ್ಲ ಗವಟೆ ಇತ್ಯಾದಿ ಸುಲಭವಾಗಿ ಆಯಾ ಪ್ರದೇಶದಲ್ಲಿ ಗುರುತಿಸಬಹುದಾದ ನೂರಾರು ಸಸ್ಯಗಳ ಪ್ರಾದೇಶಿಕ ನಾಮಗಳ ಬಾಹುಳ್ಯವು ಅಚ್ಚರಿಯನ್ನುಂಟು ಮಾಡುತ್ತದೆ. ಆಗಿನ ಜನಪದ ಸಸ್ಯ ಜ್ಞಾನಿಗಳು ಸಸ್ಯಗಳಿಗಿಟ್ಟ ಹೆಸರುಗಳ ನೂರೆಂಟು ನಮೂನೆಗಳು ಅವುಗಳ ಹಿನ್ನೆಲೆಗಳು ಅಚ್ಚರಿ ಹುಟ್ಟಿಸುತ್ತವೆ

೨. ಉತ್ತರ ಭಾರತದ ಪ್ರಾದೇಶಿಕ ಭಾಷೆಯಲ್ಲಿ ಮತ್ತು ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದಿರುವ ಕೊಂಕಣಿಭಾಷೆಯಲ್ಲಿ ಸಂಸ್ಕೃತ ಸಸ್ಯನಾಮಗಳ ತದ್ಭವಗಳು ದೊರೆಯುತ್ತಿದ್ದು ಅಲ್ಲಿ ಅವು ಜನರ ನಡುವೆ ಬದುಕಿವೆ. ಇಂಥಲ್ಲಿ ಸಸ್ಯನಾಮ ಅಧ್ಯಯನಕ್ಕೆ ಜೀವಂತಿಕೆಯಿರುತ್ತದೆ..ಯಾಕೆಂದರೆ ಆ ಜನ ಅಲ್ಲಿಯ ತಾವು ಬಲ್ಲ ಹೆಸರಿನ ಗಿಡಗಳನ್ನು ಬೆರಳಿಟ್ಟು ತೋರಿಸಬಲ್ಲರು. ದ್ರಾವಿಡ ಭಾಷಾ ಪ್ರದೇಶದಲ್ಲಿ ಕೂಡ ಅಲ್ಪ ಪ್ರಮಾಣದಲ್ಲಿ ಸಂಸ್ಕೃತದ ತದ್ಬವಗಳು ಮತ್ತು ಮೂಲ ರೂಪಗಳು ಜಾರಿಯಲ್ಲಿದ್ದರೂ ಅವು ಆ ಹೆಸರಿನೊಂದಿಗೆ ಜೀವಂತವಾಗಿರುವ ಕಾರಣ ಇಂಥಲ್ಲಿ ಪ್ರಾದೇಶಿಕ ಸಸ್ಯನಾಮಾಧ್ಯಯನ ಸೊಗಸಾಗಿರತ್ತದೆ, ಸಂಸ್ಕೃತದಲ್ಲಿಯಂತೆ ನಿರ್ಜೀವ ಅಂದರೆ ಜನ ಬಳಕೆಯಲ್ಲಿರದ ಬಹುನಾಮಗಳು ಇಲ್ಲಿ ಸಸ್ಯ ಅಧ್ಯಯಾನಾರ್ಥಿಗಳ ದಿಕ್ಕು ಕೆಡಿಸುವದಿಲ್ಲ. ಏಕೆಂದರೆ ಅವುಗಳನ್ನು ನಿಖರವಾಗಿ ತೋರಿಸುವ ಉದ್ದೇಶ ಪೂರ್ವಕವಾಗಿ ಅಧ್ಯಯನ ಮಾಡಿಥದ ಆದರೆ ಅನುಭವಿಗಳಾದ ಜನ ಆಯಾ ಹೆಸರಿನ ಗಿಡಗಳ ಜೊತೆಗಿರುತ್ತಾರೆ.

೩. ಜನಬಳಕೆಯಿಂದ ತಪ್ಪಿ ಹೋಗಿರುವ ಸಂಸ್ಕೃತದ ಹೆಸರುಗಳ ಸಂದರ್ಭದಲ್ಲಿ ಈ ಅನುಕೂಲತೆಯಿಲ್ಲ. ಸಂಸ್ಕೃತದ ಅನೇಕ ಈ ಹೆಸರುಗಳು ಪುಸ್ತಕದ ಬದನೆಕಾಯಿ. ಏಕೆಂದರೆ ಅವು ಹೊರಗೆ ಜನ ಸಾಮಾನ್ಯರೊಂದಿಗೆ ಬಾಳುತ್ತಿಲ್ಲ.

೪. ಬಲಾ ಅಪಾಮಾರ್ಗಾದಿಗಳನ್ನು ಅದೇತಾನೆ ಕಾಲೇಜಿನಲ್ಲಿ ಅಧ್ಯಯನ ಮಾಡಿಬಂದ ಸ್ನಾತಕರು ನಿತ್ಯ ತಮ್ಮ ಕಾಲಬಳಿ ಹುಟ್ಟಿ ಬೆಳೆಯುವ ಕಡವಣಿಕೆ ಉತ್ತರಣೆಗಳನ್ನು ಕೂಡ ಗುರುತಿಸಲು ಅಶಕ್ಯರಾಗಿರುವದುಂಟು. ಆದ್ದರಿಂದ ಜನಪದವೈದ್ಯ ತಿಳಿಯಬಯಸಿದರೆ ಇವರು ಆಯಾ ಕ್ಷೇತ್ರದಲ್ಲಿ ಅಡ್ಡಾಡಿ ಗಿಡಗಳ ಜನಪದ ಹೆಸರು ಸಂಗ್ರಹಿಸುವ ಅವಶ್ಯಕತೆ ಉಂಟಾಗುತ್ತದೆ.

೫. ಜನಪದ ಸಸ್ಯನಾಮ ದಾಖಲೀಕರಣ ಮತ್ತು ಈ ಹೆಸರುಗಳ ಅಧ್ಯಯನದಿಂದ ಆಯುರ್ವೇದ ವಿದ್ಯಾರ್ಥಿಗಳಿಗೂ ಪ್ರಯೋಜನವಾಗುತ್ತದೆ. ಹಾಗೂ ಜನಪದ ವೈದ್ಯದ ಸುಸಂಗತ ದಾಖಲೀಕರಣದಿಂದ ಅವರಿಗೆ ಆಯುರ್ವೇದಲ್ಲಿಲ್ಲದ ಹೊಸವೈದ್ಯ ಜ್ಞಾನ ಲಭ್ಯವಾಗುತ್ತದೆ.

೬. ಜನಪದ ಸಸ್ಯನಾಮಗಳನ್ನು ಅಧ್ಯಯನಕ್ಕೆತ್ತಿಕೊಂಡರೆ ಈ ಹೆಸರುಗಳ ಹಿನ್ನೆಲೆಯ ಅಧ್ಯಯನವು ಕುತೂಹಲಕಾರಿಯೂ ರಂಜನೀಯವೂ ಆಗಿ ಕಂಡುಬರುತ್ತವೆ. ಜೊತೆಗೆ ಈ ಸಸ್ಯನಾಮಗಳನ್ನು ಅವು ದೊರೆಯುವ ಆಯಾ ಪ್ರದೇಶದ ಹೆಸರಿನ ದಾಖಲೆಯೊಂದಿಗೆ ಗುರಿತಿಸಿಕೊಂಡರೆ ಅಧ್ಯಯನಕ್ಕೆ ಇನ್ನಷ್ಟು ಜೀವಂತಿಕೆ ಬರುತ್ತದೆ. ನಿಖರತೆ ಬರುತ್ತದೆ. ಮುಂದಿನ ಅಧ್ಯಯನಾರ್ಥಿಗಳಿಗೆ ಅನುಕೂಲವಾಗುತ್ತದೆ. ಈ ಜನಪದ ಸಸ್ಯನಾಮಗಳು ಜನಪದ ಸಂಸ್ಕೃತಿ ದರ್ಶನಕ್ಕೆ ತೋರುದೀಪಗಳಾಗಿವೆ. ಇವುಗಳ ಅಧ್ಯಯನದಿಂದ ನಮ್ಮ ಜಾನಪದರ ಪ್ರತಿಭೆ, ಸೂಕ್ಷ್ಮ ನಿರೀಕ್ಷಣಾ ಶಕ್ತಿ ಜೀವನಾನುಭವಗಳ ದರ್ಶನವಾಗುತ್ತದೆ.

೭.	ಈ ಜನಪದ ಸಸ್ಯನಾಮಗಳ ಹುಟ್ಟು ವೈವಿಧ್ಯಮಯವಾಗಿದೆ ಕೆಲವು ಪ್ರಾಣಿ ಸಂಬಂಧಿತವಾದರೆ ಕೆಲವು ರೋಗ ಸಂಬಂಧಿತವಾಗಿದೆ. ಕೆಲವು ರೂಢ ನಾಮಗಳಾಗಿದ್ದರೆ ಮತ್ತೆ ಕೆಲವು ಜಾನಪದರ ಸುತ್ತಲಿನ ವಸ್ತು ಮತ್ತು ಪ್ರಾಣಿ ಪ್ರಪಂಚವನ್ನು ಒಳಗೊಂಡ ರೂಪಕಗಳಾಗಿವೆ. ರೋಗ ಸಂಬಂಧಿತವಾಗಿರುವ ಹೆಸರುಗಳು ಜಾನಪದರ ರೋಗ ವಿಜ್ಞಾನದ ಅರಿವು ಮೂಡಿಸುತ್ತವೆ. [ಕನ್ನಡ ಜನಪದ ಸಸ್ಯನಾಮಗಳ ಅಧ್ಯಯನವು ಈ ಮಾತನ್ನು ಧೃಡಪಡಿಸಬಲ್ಲದು.]

೮.	ಹುಲಿ ಮೊಗರಿ ಎಂಬ ತುಟಿಯಲ್ಲಿ ಕಾಣಿಸಿಕೊಳ್ಳುವ ಒಂದು ಬಗೆಯ ಹುಣ್ಣಿಗೆ ಮದ್ದಾಗಿರುವ ಹುಲಿಮೊಗರಿಬಳ್ಳಿ, ಮೊಳೆರೋಗವನ್ನು ಪರಿಹರಿಸಬಲ್ಲ ಮುಲಾದಿಗೆಂಡೆ, ಬಾಣಂತಿಯರನ್ನು ನಂಜೇರದಂತೆ ರಕ್ಷಿಸಬಲ್ಲ ನಂಜಿನಗೆಂಡೆ, ಅರಶಿನಗುಂಡಗೆ ರೋಗವನ್ನು ನಿವಾರಿಸಬಲ್ಲ ಕಾಮಾಲೆ ಸೊಪ್ಪು (ಗರಗ), ಚರ್ಮ ರೋಗ ಪರಿಹಾರಕ ಗಾಳಿ ಸೊಪ್ಪು, ಉಪ್ಪು ತಿಂದರೆ ವಿಷವಾಗುವ ರೋಗಕ್ಕೆ ಮದ್ದಾಗಿರುವ ಉಪ್ಪಿಸೆ ಬಳ್ಳಿ, ಮುಟ್ಟು ದೋಷದ ಸೊಪ್ಪು, ಬಾಯಿಒಡಕನ ಸೊಪ್ಪು, ತಲೆ ನೋವಿನ ಬಳ್ಳಿ, ಸಂದು ವಾತದ ಬಳ್ಳಿ, ದಮ್ಮಿನ ಬಳ್ಳಿ, ಅಪಥ್ಯವಾಗದಂತೆ ತಡೆಯುವ ಅವಪತಿ ಚಕ್ಕೆ ಇತ್ಯಾದಿ ಗಿಡ ಮರ ಬಳ್ಳಿಗಳ ಹೆಸರುಗಳು ಜಾನಪದರ ರೋಗ ವಿಜ್ಞಾನವನ್ನು ಅದಕ್ಕೆ ತಕ್ಕ ಮದ್ದನ್ನು ಒಟ್ಟಿಗೆ ತಿಳಿಸುತ್ತವೆ. [ಇವುಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ತೀವ್ರ ಬಗೆಯ ಅಧ್ಯಯನ ಬೇಕು.]

೯.	[ಇತರ ಭಾಷಾ ನೆಲೆಗಳಲ್ಲಿರುವಂತೆ ಕನ್ನಡ. ಜನಪದ ಸಸ್ಯ ನಾಮಗಳೂ ವೈವಿಧ್ಯಮಯವಾಗಿವೆ. ಒಂದು ಸೀಮಿತ ಪ್ರದೇಶವನ್ನು ಗಣನೆಗೆ ತೆಗೆದುಕೊಂಡರೂ ಅಲ್ಲಿ ಒಂದು ಗಿಡಕ್ಕೆ ಹಲವಾರು ಕನ್ನಡ ಹೆಸರುಗಳು ಇರುವದು ಕಂಡು ಬರುತ್ತದೆ. ಆದರೆ ಸಾಮಾನ್ಯವಾಗಿ ಒಂದು ನಿಗದಿತ ಪ್ರದೇಶದಲ್ಲಿ ಒಂದೇ ಹೆಸರಿರುವುದುಂಟು. ಆದರೆ ಆ ಪ್ರದೇಶವನ್ನು ಬಿಟ್ಟು ತುಸು ಆಚೆ ಹೋದರೆ ಸಾಕು ಅಲ್ಲಿ ಮತ್ತೊಂದು ಹೆಸರು ಆ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತದೆ.]

೧೦. ಯುಫೊರ್ಬಿಯಾ ಹಿರ್ಟಾ ಎಂಬ ಸಸ್ಯಶಾಸ್ತ್ರೀಯ ಹೆಸರುಳ್ಳ ಕೆಂಪು ನೆನೆಯಕ್ಕಿಯ ಗಿಡವನ್ನು ಕನ್ನಡ ಕರಾವಳಿಯ ಉತ್ತರ ಭಾಗಗಳಾದ ಕುಮಟಾ, ಹೊನ್ನಾವರದ ಹವ್ಯಕರು ಬಾಯಿ ಒಡಕಿನ ಗಿಡವೆನ್ನುತ್ತಾರೆ. ಇದು ಈ ಗಿಡದ ಈ ರೋಗ ನಿವಾರಣಾ ಗುಣದ ನೆಲೆಯಲ್ಲಿ ಹುಟ್ಟಿದ ಹೆಸರಾಗಿದೆ. ಆದ್ದರಿಂದ ಬಾಯಿಯಲ್ಲಿ ಚಿಕ್ಕ ಗುಳ್ಳೆಗಳೆದ್ದು ನೋವು ಕೊಡುವಾಗ ಈ ಗಿಡದ ಕುಡಿಗಳನ್ನು ಕಾಯಿಸುಳಿ ಜೊತೆ ಅರೆದು ಮಜ್ಜಿಗೆ ಉಪ್ಪು ಸೇರಿಸಿ ಅನ್ನದ ಜೊತೆ ಸೇವಿಸುತ್ತಾರೆ. ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದ ಗೌಡರು ಮತ್ತು ದೀವರು ಇದನ್ನು ಹಾಲ್ಕುಡಿಯೆನ್ನುತ್ತಾರೆ. ಇದು ಈ ಗಿಡವು ಒಸರುವ ಹಾಲಿನ ಬಣ್ಣದ ರಸವನ್ನು ಗಮನಿಸಿ ರೂಢಿಗೆ ತಂದ ಹೆಸರಾಗಿದೆ. ಕರ್ನಾಟಕದ ಹಲವು ಕಡೆ ದೊರೆಯುವ ಇದರ ಇತರ ಹೆಸರುಗಳೆಂದರೆ ಅಚ್ಚೆಸೊಪ್ಪು, ಜಂತಿಕಸ, ಬರಸಿಗಿಡ ಇತ್ಯಾದಿ. ಸಂಸ್ಕೃತದಲ್ಲಿ ದುಗ್ಧಿಕಾ ನಾಗಾರ್ಜುನಿ, ಹಿಂದಿಯಲ್ಲಿ ದುಗ್ಧಿ, ತಮಿಳಿನಲ್ಲಿ ಅಮ್ಮಮ್ಮ್, ತೆಲುಗಿನಲ್ಲಿ ರೆಡ್ಡಿವಾರಿ, ಇಂಗ್ಲೀಷಿನಲ್ಲಿ ಆಸ್ಟ್ರೇಲಿಯನ್ ಹರ್ಬ್, ಸ್ನೇಕ್ ವೀಡ್ ಇತ್ಯಾದಿ ಹೆಸರುಗಳಿವೆ. ತುಸು ಗಿಳಿಹಸುರು ಬಣ್ಣದ ಬಿಳಿ ಬಾಯೊಡಕನ ಗಿಡಗಳೂ ಬೆಂಗಳೂರಿನ ಹಾದಿಬೀದಿ ಹೂತೋಟಗಳಲ್ಲಿ ಸಾಕಷ್ಟು ಕಡುಬರುತ್ತವೆ. ಇದರ ಅರಿವಿಲ್ಲದವವರು ಇದನ್ನು ಕಳೆಯೆಂದು ಬಗೆದು ಕಿತ್ತು ಬಿಸಾಡುತ್ತಾರೆ. ಅದರೆ ಬಲ್ಲವರು ಇವುಗಳನ್ನು ಗೌರವಿಸುತ್ತಾರೆ.

ಬೆಂಗಳೂರಿನ ಬೆರಕೆಸೊಪ್ಪು ಮಾರಾಟದ ಮಹಿಳೆಯರ ನಡುವೆ ಇಂತಹ ಅನೇಕ ಗಿಡಗಳು ಪರಿಚಯದಲ್ಲಿವೆ. ಇವರು ಇವನ್ನು ಚಿವುಟಿ ತಮ್ಮ ಬೆರಕೆ ಸೊಪ್ಪಿನ ಚೀಲದಲ್ಲಿರುವ ಇತರ ಸೊಪ್ಪುಗಳ ಜೊತೆ ಇಟ್ಟು ಮಾರಾಟಕ್ಕೆ ತರುತ್ತಾರೆ. ಅಡುವ ಮಹಿಳೆಯರು ಬೆರಕೆ ಸೊಪ್ಪು ಬಳಸಿ ರುಚಿಕಟ್ಟಾದ ಮಸ್ಸೊಪ್ಪು ಬಸ್ಸಾರು ಅಡಬಲ್ಲರು. ಆದರೆ ಬೆರಕೆ ಸೊಪ್ಪಿನಲ್ಲಿರುವ ಎಲ್ಲಸೊಪ್ಪುಗಳ ಹೆಸರನ್ನು ಅವರು ಅರಿಯರು. ಬೆಂಗಳೂರಿನಲ್ಲಿಯೂ ಪಿಜ್ಜಾಬರ್ಗರ್ ಪ್ರಿಯರ ನಡುವೆಯೂ ಬೆರಕೆ ಸೊಪ್ಪಿನ ಮಹತಿಯನ್ನರಿತ ಜನ ಇನ್ನೂ ಇದ್ದಾರೆ. ಮಂಗಳವಾರ

ಶುಕ್ರವಾರ ಕೆಲವರು ಬನಶಂಕರಿ ದೇವಿಯ ದರ್ಶನಕ್ಕೆ ನಡೆದರೆ ಮತ್ತೆ ಕೆಲವರು ಬೆರಕೆ ಸೊಪ್ಪು ಮಾರಾಟದ ಸ್ಥಳಕ್ಕೆ ಭೆಟ್ಟಿ ಕೊಡುತ್ತಾರೆ. ಬೆರಕೆ ಸೊಪ್ಪಿನ ಕಟ್ಟಿನಲ್ಲಿ ಯಾವ ಯಾವ ಗಿಡಗಳಿರುತ್ತವೆ? ಇದನ್ನು ಎಲ್ಲರೂ ಬಲ್ಲವರಲ್ಲ. ಕೆಲವರಿಗೆ ಅದರಲ್ಲಿ ಹೊನಗೊನೆ ಹರಿಗೆ ಇತ್ಯಾದಿ ನಾಲ್ಕಾರು ಸೊಪ್ಪುಗಳಿರುವದು ಗೊತ್ತು. ಆದರೆ ಅದರಲ್ಲಿ ಕಾಡು ಹಣ್ಣಿನ ಗಿಡವಾದ ಕಾರಿಮುಳ್ಳಿನ ಎಲೆ, ಬಾಳಂತಿಯ ಮದ್ದಿನ ಸೀಗೆ ಕುಡಿ, ಆಯುರ್ವೇದದಲ್ಲಿ ಅಪಾಮಾರ್ಗವೆಂದು ಹೆಸರು ಪಡೆದು ಖ್ಯಾತಿ ಹೊಂದಿರುವ ಉತ್ತರಣೆಯ ಚಿಕ್ಕ ಒಂದೆರಡು ಕುಡಿಗಳನ್ನೂ ಸೇರಿಸಿ ಬೆರಕೆ ಸೊಪ್ಪಿಗೆ ಆಹಾರ ಮೌಲ್ಯದ ಜೊತೆಗೆ ಔಷಧ ಮೌಲ್ಯವನ್ನೂ ತಂದು ಕೊಟ್ಟಿರುವ ಬೆರಕೆಸೊಪ್ಪಿನ ಈ ಗಿಡ ತಜ್ಞೆಯರ ಅಪಾರ ಸಸ್ಯ ಜ್ಞಾನದ ಮೌಲ್ಯ ಬಹುಜನರಿಗೆ ತಿಳಿದಿಲ್ಲ. ಬೆರಕೆಸೊಪ್ಪಿನಲ್ಲಿ ಅಣ್ಣೆ ಸೊಪ್ಪು ಕೋಲಣ್ಣೆ ಸೊಪ್ಪು, ಕನ್ನೆ ಸೊಪ್ಪು, ಹೊನಗೊನೆ, ಮುಳ್ ಹರಿವೆ, ಬಳೆಒಡಕ, ಸಬ್ಬಸಿಗೆಯ ಹಾಗೆ ಕಾಣುವ ಅಜ್ಜಿ ಸೊಪ್ಪು, ಕೋಳಿ ಸೊಪ್ಪು. ಗಂಧದ ಸೊಪ್ಪು, ಹುಳಿಚಿಕ್ಕಿ, ಕರಿಗಣಿಕೆ, ಬಿಳಿ ಗಣಿಕೆ, ಕಿರಕ ಸಾಲೆ, ಚಿಕ್ಕ ಎಲೆಯ ಮಲದಾಕ್ಷೆ, ಕೊಟ್ನಿ, ಗೊರಜಿ, ಸೀಗೆ, ಗೊದರ್ಲೆ, ಅಕ್ಕಿಮುರಿಸೊಪ್ಪು, ಅರ್ಚಟ್ಲೆ, ದೊಗ್ಗರಿಗೆ, ಉಸಿರಸೊಪ್ಪು ಇತ್ಯಾದಿ ಹೆಸರಿನ ಸುಮಾರು ಇಪ್ಪತ್ತೊಂದು ಬಗೆಯ ಸೊಪ್ಪುಗಳನ್ನು ದಕ್ಷಿಣ ಕರ್ನಾಟಕದ ಬೆರಕೆ ಸೊಪ್ಪು ಮಾರುವ ಮಹಿಳೆಯರು ಗುರುತಿಸಬಲ್ಲರು. [ಬೆರಕೆ ಸೊಪ್ಪು ಮಾರಾಟ ಮಾಡುವ ಮಹಿಳೆಯರು ಬತ್ಸಾರಿಗೆ ಹುಳಿ ರುಚಿ ಒದಗಿಸುವುದಕ್ಕೆ ಸೊಪ್ಪನ್ನು ತುಸು ಪ್ರಮಾಣದಲ್ಲಿ ಸೇರಿಸುತ್ತಾರೆ. ಇದರ ಪ್ರಬೇಧವಾದ ದೊಡ್ಡ ಹುಳಿಸೊಪ್ಪೂ ಇವರಿಗೆ ಗೊತ್ತು.]

ಬೆರಕೆ ಸೊಪ್ಪು ಮಾರಾಟ ಮಾಡುವವರ ಇಂತಹ ಅನೇಕಗಿಡಗಳ ತೆರೆಮರೆಯ ಜ್ಞಾನ ಅಧ್ಯಯನ ಯೋಗ್ಯವಾಗಿದೆ. ಬೆರಕೆ ಸೊಪ್ಪಿನಲ್ಲಿರುವ ಪ್ರತಿಯೊಂದು ಗಿಡವೂ ಮಹಾಪ್ರಬಂಧಕ್ಕೆ ಯೋಗ್ಯ ವಿಷಯವಾಗಿದೆ. ಅಡ್ಡಿಕೆಸೊಪ್ಪಿನ ಗಿಡವನ್ನು ಅಧ್ಯಯನಕ್ಕೊಳಪಡಿಸಿ ಪದವಿ ಪಡೆದವರನ್ನು, ನೆಲನೆಲ್ಲಿಯ ಕಾಮಾಲೆ ಗುಣಪಡಿಸುವ ಗುಣವನ್ನು ಹೊರತಂದು ನೋಬೆಲ್ ಪಡೆದವರನ್ನು ಇಲ್ಲಿ

ನೆನಪಿಸಿಕೊಳ್ಳಬಹುದು.

೧೧. ಕರ್ನಾಟಕದ ಬಹುಜನ ಬಲ್ಲ ಹುಳಿಚಿಕ್ಕಿ ನವುರಾದ ಗಿಳಿಹಸುರು ಬಣ್ಣದ ಕೋಮಲ ಕಾಯದ ಚಿಕ್ಕಚಿಕ್ಕ ಎಲೆಗಳನ್ನು ನೆಲಮುಚ್ಚುವಂತೆ ಹರಡಿಕೊಂಡು ತಿಳಿಹಳದಿ ಬಣ್ಣದ ಹೂವನ್ನು ನಡುನಡುವೆ ಅರಳಿಸಿಕೊಳ್ಳುವ ಮುದ್ದಾದ ಗಿಡ. ಇದನ್ನು ಕಂಡವರಿಗೆ ಅಕ್ಕರೆ ಉಕ್ಕುತ್ತದೆ. ಆದ್ದರಿಂದಲೇ ಶ್ರೀನಿವಾಸನನ್ನು ಶೀನು ಎಂದು ನಾರಾಯಣನನ್ನು ನಾಣಿಯೆಂದು ನಲುಮೆಯಿಂದ ಕರೆಯುವಂತೆ ಇದನ್ನು ಹುಳಿಚಿಕ್ಕಿ ಯೆಂದು ಮನೆಯ ಚಿಕ್ಕ ಮಕ್ಕಳನ್ನು ಕರೆಯುವಂತೆ ಪ್ರೀತಿಯಿಂದ ಕರೆದಿದ್ದಾರೆ. ಬೆಂಡೆ ಕಾಯಿಯನ್ನು ಹೋಲುವ ಎಳೆಯ ಬೆಂಡೆಕಾಯಿಯ ತುದಿಗಿಂತ ಸಪುರವಾಗಿರುವ ಅರ್ಧ ಇಂಚಿನಷ್ಟು ಮಾತ್ರ ಉದ್ದವಿರುವ ಬೆಂಡೆಕಾಯಿ ಬಣ್ಣದ ಇದರ ಚಿಕ್ಕ ಕಾಯಿಗಳನ್ನು ಕಂಡಾಗ ಗಲಿವರನ ಬಳಿಯ ಲಿಲಿಪುಟ್ಟನ ನೆನಪು ಬರುತ್ತದೆ. ಗಿಡ ಆಕಾರದಲ್ಲಿ ಚಿಕ್ಕದಾದರೂ ಇದರ ಮಹತಿ ದೊಡ್ಡದು. ಮಕ್ಕಳು ಇದರ ಎಲೆಯನ್ನು ತಿನ್ನಲು ಹೆಚ್ಚು ಇಷ್ಟ ಪಡುತ್ತಾರೆ. ಇದನ್ನು ಬಲ್ಲ ಕೆಲವು ಮಹಿಳೆಯರು ಇದನ್ನು ಅಡುಗೆಯಲ್ಲಿ ಬಳಸುತ್ತಾರೆ. ಚಟ್ನಿ ಮಾಡುವಾಗ ಹುಣಸೆಯ ಹಣ್ಣಿನ ಬದಲಿಗೆ ಇದರ ಬಳಕೆಯಿದೆ. ಅತಿಸಾರ ರೋಗವಿದ್ದಾಗ ಬಿಸಿನೀರಿನಲ್ಲಿ ಎಲೆಯ ರಸ, ಜೇನುತುಪ್ಪ ಸೇರಿಸಿ ಕುಡಿಯಬಹುದು. ಮಜ್ಜಿಗೆಯಲ್ಲಿ ಇದರ ಕುಡಿಗಳನ್ನು ಅರೆದು ತಂಬುಳಿ ಮಾಡಿ ಸೇವಿಸಿದರೆ ಅತಿಸಾರಕ್ಕೆ ಇದು ಮನೆಮದ್ದು ಹಾಗೂ ಊಟಕ್ಕೆ ಅಡುಗೆ ಸಿದ್ಧ.

ಸೊಪ್ಪಿನ ರಸವು ಅಜೀರ್ಣಕ್ಕೆ, ಅತಿಸಾರಕ್ಕೆ, ಈ ಸಂಬಂಧಿತ ಜ್ವರಕ್ಕೆ ಮದ್ದು. ಮೈ ಮೇಲಿನ ತದ್ದು, ಜಿಡ್ಡುಗಳನ್ನು ಎಲೆಯ ರಸವು ಸಮರ್ಥವಾಗಿ ನಿವಾರಿಸುತ್ತದೆ.

ಎಲೆಗಳನ್ನು ಜಗಿಯುವದರಿಂದ ಒಸಡುನೋವು, ಹಲ್ಲುನೋವು ದೂರವಾಗುತ್ತದೆ. ಒಣ ಎಲೆಯ ಪುಡಿಯಿಂದ ಹಲ್ಲನ್ನು ತಿಕ್ಕುವುದರಿಂದ ಹಲ್ಲುಗಳ ಆರೋಗ್ಯ ಸುಧಾರಿಸುತ್ತದೆ.

ಎಲೆಗಳ ಸೇವನೆ ಹಸಿವನ್ನು ಹೆಚ್ಚಿಸುತ್ತದೆ. ಉದರ ಶೂಲೆಯನ್ನು ಗುಣಮಾಡುತ್ತದೆ. ಎಲೆಯ ರಸಕ್ಕೆ ಇಳಿಬಿದ್ದ ಹಾಗೂ ನಿರಿಗೆ ಬಿದ್ದ ಚರ್ಮವನ್ನು ಸಂಕುಚಿತಗೊಳಿಸುವ ಶಕ್ತಿಯಿದೆ. ಮುಖ ಹಾಗೂ ಮೈ-ಕೈಗಳಿಗೆ ಇದರ ರಸವನ್ನು ಹಚ್ಚುವುದರಿಂದ ಮುಖ ಹಾಗೂ ಇತರತ್ರ ಇರುವ ಚರ್ಮದ ಸುಕ್ಕು ನಿವಾರಣೆಯಾಗುತ್ತದೆ, ಮುಖಕ್ಕೆ ಕಾಂತಿ ಬರುತ್ತದೆ. ಹರಿತವಾದ ವಸ್ತುಗಳಿಂದ ಅಥವಾ ಬೀಳುವದರಿಂದ ಶರೀರದ ಮೇಲೆ ಗಾಯವಾದರೆ ಕೂಡಲೇ ಈ ಎಲೆಯ ರಸ ಹಚ್ಚಿರಿ. ಬಹುಬೇಗ ರಕ್ತನಿಂತು ಗಾಯಗುಣವಾಗುತ್ತದೆ. ಆಯುರ್ವೇದದಲ್ಲಿ ಹೇಳಲಾದ ಪ್ರಸಿದ್ಧ ಚಂಗೇರಿ ಘೃತವೆಂಬ ಔಷಧವನ್ನು ಹುಳಿಚಿಕ್ಕಿ ಸೊಪ್ಪಿನಿಂದ ತಯಾರಿಸಿಲಾಗುತ್ತದೆ.

ವೈಜ್ಞಾನಿಕ ಸಂಶೋಧನೆಗಳು ಮೇಲೆ ತಿಳಿಸಿದ ಔಷಧದ ಅನೇಕ ಗುಣವನ್ನು ಒಪ್ಪಿಕೊಂಡಿವೆ. ಎಲೆಯಲ್ಲಿ ಸಿ ಜೀವಸತ್ವ, ಕ್ಯಾರೋಟಿನ್ ಸುಣ್ಣ ಹಾಗೂ ಅನೇಕ ಉಪಯುಕ್ತ ಆಮ್ಲಗಳಿವೆಯಂತೆ.]

೧೨. ಬೆಂಗಳೂರು ಸುತ್ತಮುತ್ತಲಿನವರ ಮುಖ್ಯ ಆಹಾರವಾದ ರಾಗಿಮುದ್ದೆಗೆ ಬೆರಕೆ ಸೊಪ್ಪಿನ ಬಸ್ಸಾರು, ಮಸ್ಸೊಪ್ಪು ಹೊಂದಿಕೊಂಡರೆ, ಉತ್ತರ ಕರ್ನಾಟಕದ ಬಯಲು ಸೀಮೆಯ ಊಟದಲ್ಲಿ ಜೋಳದ ರೊಟ್ಟಿಗೆ ಪಲ್ಯಗಳು ಹೊಂದಿಕೊಳ್ಳುತ್ತವೆ. ಆದ್ದರಿಂದ ಇಲ್ಲಿಯ ಮಹಿಳೆಯರು ಪಲ್ಯದ ಸೊಪ್ಪುಗಳ ಮೇಲೆ ಕಣ್ಣಿಡುತ್ತಾರೆ. ಭೂಮಿಯೇ ಸ್ವತಃ ನಿಂತು ಬೆಳೆದುಕೊಡುವ ತಮ್ಮ ಹೊಲದ ಬದಿಯ; ಅಜ್ಞಾನಿಗಳು ಕಳೆ ಸೊಪ್ಪುಗಳೆಂದು ಗುರುತಿಸುವ; ದಾಗಡಿ ಹಕ್ಕರಿಕೆ ಗೋಳಿ ಪಲ್ಯ, ಫರಿಗೆ ಮುಂತಾದವುಗಳನ್ನು ಪಲ್ಯದ ಸೊಪ್ಪು ಎಂದು ಗುರುತಿಟ್ಟುಕೊಂಡು ಅವುಗಳನ್ನು ಹರಿದು ಚಿವುಟಿ ಸೀರೆಯ ಮಡಿಲು ತುಂಬಿಕೊಳ್ಳುತ್ತಾರೆ. ಸಂಜೆ ಮನೆ ಮುಟ್ಟಿದವರೇ ನಿಮಿಷಾರ್ಧದಲ್ಲಿ ಪಲ್ಯ ಅಡುತ್ತಾರೆ. ಅಥವಾ ಹಸಿ ಹಸಿ ಸೊಪ್ಪುಗಳನ್ನೇ ಖಡಕ್ರೊಟ್ಟಿ, ಬಿಸಿ ರೊಟ್ಟಿಗಳ ಮೇಲಿಡುತ್ತಾರೆ.

೧೩ ಕರಾವಳಿ ಜನರಲ್ಲಿ ಕೆಲವರು ಹೊಳೆ ಬಾಳೆಕಾಯಿಯನ್ನು ತಿನ್ನುವುದಿಲ್ಲ. ಸಮುದ್ರದ ಸಮೀಪ ವಾಸವಾಗಿದ್ದರೂ ಊಟದ ಹೊತ್ತಿಗೆ ಇವರು ಸಮುದ್ರದ ಕಡೆಗೆ ಮುಖ ಮಾಡುವದಿಲ್ಲ. ಇವರ ಊಟದಲ್ಲಿ ಬಿಸಿಬಿಸಿ ಕುಚ್ಚಿಗಿ ಅಥವಾ ಬೆಣ್ತಕ್ಕಿಯ ಅನ್ನದ ಜೊತೆ ಕಿಮುಳ್ಳಿ ಉಣ್ಣಬಹುದಾದ ಬೆವರು ಸುರಿಸುತ್ತಲೇ ಚೀಪಿ ಚೀಪಿ ಕುಡಿಯ ಬಹುದಾದ ಹಸಿ, ಬಿಸಿ, ಹುಳಿ, ಕಹಿ, ಒಗರು, ಸಿಹಿ, ತುಸುಮೆಣಸು, ತುಸುಉಪ್ಪು ಬೆರೆಸಿದ ಷಡ್ರಸ ಪೂರಿತ ಶಬ್ದ ಮಣಿದರ್ಪಣಕಾರ ಕೇಶಿರಾಜನೂ ರುಚಿಯುಂಡ ತಂಬುಳಿಯದೇ ಮೇಲುಗೈ. ತಂಪಿದ್ದಲ್ಲಿ ಬಸಳೆಯಂತೆ ಹಬ್ಬುವ ಸೊರಲೆ ಬಳ್ಳಿ, ಬಿಸಿಲಲ್ಲಿ ಬೆಳೆಯುವ ಶರ್ಕಾಳು, ಹಾಡೆಕರೆ ಮುಂತಾದ ತೋಟದ ಕಳೆಗಳು ಅಂಗಳದಲ್ಲಿ ಕಾದಿಟ್ಟುಕೊಂಡ ಮನೆಮದ್ದಿನ ಗಿಡಗಳಾದ ಸಂಬಾರ ಸೊಪ್ಪು, ಮಂಜ ಪತ್ರೆ ಕುಡಿಗಳು, ತೋಟದ ಮೇಲ್ಗಡೆಯ ಬೇಣದ ಹಿಂಡುಗಳಲ್ಲಿಯ ನೆಡತಿಗೆ, ನಕ್ಕರಕ, ಕುಸುಮಾಲೆ, ಅಲ್ಲಿ ಮರವಾಗಿರುವ ನೆಲ್ಲಿ, ಬಡಗಣಿಗಳ ಕುಡಿಗಳು ಬೇಲಿಬದಿಯ ನೆಡತಿಗೆ, ಸಣ್ಣೆಲೆ, ಬೇಲಿಗೆ ಹಬ್ಬಿರುವ ಗಜ್ಜಿಗದೆಲೆ ತಂಬುಳಿಗೆ ಪ್ರಧಾನ ಪರಿಕರಗಳಾಗಿವೆ.

೧೪ ಗಡ್ಡೆ ಗೆಣಸನ್ನು ಆಹಾರವಾಗಿ ಬಳಸುವ ಹೆಗ್ಗಡೆ ದೇವನ ಕೋಟೆಯ ಅಕ್ಕಿ ಗೆಣಸು, ನೋರೆ ಗೆಣಸು, ಸಾಲು ಗೆಣಸು, ಇವು ಕೇವಲ ಹೆಸರುಗಳಲ್ಲ. ಹೆಸರಿಟ್ಟು ನಮ್ಮ ಬದುಕಿಗಾಗಿ ನಮ್ಮ ಹಿರಿಯರು ಉಳಿಸಿ ಕೊಟ್ಟ ಜ್ಞಾನ ನಿಧಿಯ ತೋರು ದೀಪಗಳು.

೧೫ ಈ ಸಸ್ಯನಾಮಗಳ ಜೊತೆ ವಿಶೇಷಣ ಹಾಗೂ ರೂಪಕದ ರೂಪದಲ್ಲಿ ಬಳಕೆಯಾಗುವ ಪ್ರಾಣಿಗಳ ಹೆಸರುಗಳು ಗಮನಾರ್ಹವಾಗಿವೆ. ಪ್ರಾಣಿ ಪಕ್ಷಿಗಳ ಹೆಸರಿನೊಂದಿಗೆ ಜೋಡಣೆಗೊಂಡಿರುವ ಸಸ್ಯನಾಮ ವೈವಿಧ್ಯವು ಅವುಗಳೊಂದಿಗಿನ ಜಾನಪದರ ನಿಕಟ ಸಂಬಂಧವನ್ನು ತಿಳಿಸುತ್ತದೆ. ಇವು ಜಾನಪದರ ಸಾಕು ಪ್ರಾಣಿಗಳಿಗಷ್ಟೇ ಸೀಮಿತವಾಗಿಲ್ಲ. ಎತ್ತು, ಎಮ್ಮೆ, ಆಕಳು, ಆಡು, ಕುರಿ, ಹೋರಿ, ನಾಯಿ, ನರಿ, ಇಲಿ, ಹುಲಿ, ಹಂದಿ, ಆನೆ, ಕೋಳಿ, ಬೆಕ್ಕು, ಚೇಳು, ಹಾವು, ಕರಡಿಗಳು ಇಲ್ಲಿ

ಸೇರಿಕೊಂಡಿರುತ್ತವೆ. ಇವು ಜಾನಪದರ ನಾಡಿನಷ್ಟೇ ಅಲ್ಲ; ಕಾಡಿನ ಪ್ರಾಣಿಗಳೊಂದಿಗಿನ ಸಂಬಂಧವನ್ನು ತಿಳಿಸುತ್ತವೆ.

ಕೋಳಿ ಕುಟ್ಟ, ಕೋಳಿ ಜುಟ್ಟು, ಕೋಳಿ ತುರಾಯಿ ಇವು ಪಾಂಡವರ ಹರಿಗೆಯೆಂಬ ಸಸ್ಯಕ್ಕಿರುವ ಹೆಸರುಗಳಾಗಿವೆ. ಪಾಂಡವರ ಹರಿಗೆ ಗದ್ದೆಯಲ್ಲಿ ತಂತಾನೆ ಬೆಳೆಯುವ ಕಳೆಗಿಡವಾಗಿದೆ. ಈ ಗಿಡವನ್ನು ಕರಾವಳಿಯಲ್ಲಿ ಆಹಾರಕ್ಕಾಗಿ ಸೊಪ್ಪು ತರಕಾರಿಯಂತೆ ಬಳಸಲಾಗುತ್ತಿದೆ. ತೆನೆಯನ್ನು ಹೊಸ ಬತ್ತ ತರುವ "ಹೊಸತಿನ" ಹಬ್ಬದ ದಿನ ಬಾಗಿಲು ತೋರಣಕ್ಕೆ ಕಟ್ಟಿ ಅಲಂಕರಿಸುತ್ತಾರೆ. ಹೂ ಗಂಧವಿಟ್ಟು ಪೂಜಿಸುತ್ತಾರೆ.

[ಗಿಡದ ಹೆಸರು ಕೋಳಿ ಕುಟ್ಟ ಆದರೆ ವಿಶೇಷವೆಂದರೆ ಪೂಜೆಗೆ ಬಳಸುವ ಕೋಳಿ ಕುಟ್ಟ ಗಿಡದ ಕುಟ್ಟದ ಬಣ್ಣ ಬಿಳಿ. ಅಲಂಕಾರಕ್ಕಾಗಿ ನೆಟ್ಟು ಬೆಳೆಸುವ ಕೆಂಪು ಕೋಳಿಕುಟ್ಟದ ಇನ್ನೊಂದು ಗಿಡವಿದೆ. ಇದೂ ಇವರಿಗೆ ಗೊತ್ತು. ಇದರ ಕುಟ್ಟ ಸಾಕ್ಷಾತ್ ಹುಂಜಗಳ ಕುಟ್ಟವೇ. ಆದರೆ ಬಿಳಿಕುಟ್ಟದ ಹುಂಜಗಳನ್ನು ಇವರು ನೋಡಿಲ್ಲ. ಆದರೂ ಈ ಹರಿಗೆಯ ಬಿಳಿ ತೆನೆ ಇವರಿಗೆ ಇವರು ಹೆಚ್ಚು ಸಂಪರ್ಕದಲ್ಲಿರುವ ಕೆಂಪು ಕುಟ್ಟದ ಕೋಳಿಯ ಬಿಳಿ ಕುಟ್ಟವಾಗಿ ಕಂಡರೆ ಅಸಹಜವೇನಲ್ಲ. ಸೋಜಿಗವಲ್ಲ. ಇದು ಜಾನಪದ. ಉಪಮಾನ ಉಪಮೇಯಗಳಲ್ಲಿ ಸಾದೃಶವಿರಬೇಕೆಂಬ ಅಲಂಕಾರ ಶಾಸ್ತ್ರಿಗಳ ಮಾತು ಇಲ್ಲಿ ಪೂರ್ಣ ಹೊಂದದು.]

ಚೇಳುಕೊಂಡಿಗಿಡ, ಚೇಳುಬಾಲದಗಿಡವೆಂಬ ಹೆಸರುಗಳು ಒಂದೇ ಗಿಡಕ್ಕೆ ಸಂಬಂಧಿಸಿವೆ. ಚಿಕ್ಕ ಕಾಯದ ಈ ಕಳೆಗಿಡದ ಹೂ ತೆನೆಯು ಚೇಳಿನ ಕೊಂಡಿಯಂತೆ ಬಾಗಿರುತ್ತದೆ. ಇದರ ಹೂ ತೆನೆಯ ಆಕಾರವನ್ನು ಗಮನಿಸಿದವರಿಂದ ಈ ಗಿಡದ ಹೆಸರು ಸೃಷ್ಟಿಗೊಂಡಿದೆ. ಚೇಳು ಹಾಗು ಈ ಗಿಡ ಇವೆರಡು ಇವರ ನಿಕಟ ಸಂಪರ್ಕದಲ್ಲಿರುವ ಜೀವವೈವಿಧ್ಯಗಳಾಗಿವೆ. ಇದೊಂದು ಜನಪದ ವೈದ್ಯದಲ್ಲಿ ಬಳಕೆಯಾಗುವ ಮದ್ದಿನ ಗಿಡ. ಈ ಗಿಡದ ಎಲೆಯ ರಸವು ಮುಖದ ಮೇಲೆ ಏಳುವ ಮೊಡವೆಗೆ ಮದ್ದಾಗಿದೆ.

ನರಿಕಬ್ಬು ಇದು ದಕ್ಷಿಣ ಕನ್ನಡದಲ್ಲಿ ದೊರೆಯುವ ಹೆಸರು. ಅಂಕೋಲಾದಲ್ಲಿ ಮಳ್ಟೆತ್ತ ಹೊನ್ನಾವರದಲ್ಲಿ ಆರತಿ ಕುಂಡಿಗೆ ಎಂದು ಪರಿಚಿತವಾದ ಇದು ಪಶ್ಚಿಮ ಘಟ್ಟದ ಕಾಡಿನ ಬೆಳೆ, ತನ್ನ ಹವಳದ ಬಣ್ಣದಕುಂಡಿಗೆಯಲ್ಲಿ ಬೆಣ್ಣೆಯಂತಹ ಮೃದುವಾದ ದೊಡ್ಡ ಬಿಳಿ ಹೂವುಗಳನ್ನು ಬಿಡುತ್ತದೆ, ಆದ್ದರಿಂದ ಸಿರ್ಸಿಯ ಹಳ್ಳಿಗರು ಇದನ್ನು ಬೆಣ್ಣೆ ಕುಂಡಿಗೆಯೆಂದು ಗುರುತಿಟ್ಟುಕೊಂಡಿದ್ದಾರೆ. ನರಿಕಬ್ಬಿನ ಎಲೆಯನ್ನು ಇವರು ತರಕಾರಿಯಂತೆ ಬಳಸುತ್ತಾರೆ. ಇದಕ್ಕೆ ಅರ್ಧ ಅಡಿಯಷ್ಟು ಉದ್ದವಾದ ಮೂಲಂಗಿ ಗಡ್ಡೆಯಂಥ ಗಡ್ಡೆಗಳಿರುತ್ತವೆ. ಗಡ್ಡೆಯನ್ನು ವಿವಿಧ ಬಗೆಯ ಆಹಾರದಂತೆ ಟಾನಿಕ್‌ನಂತೆ ಬಳಸುತ್ತಾರೆ. ಬಾಣಂತಿಯರಿಗೆ ಗಡ್ಡೆಯ ರಸ ಹಿಂಡಿ ಬೆಲ್ಲ ಕಾಳು ಮೆಣಸು ಸೇರಿಸಿ ಹಲವು ದಿನ ಸೇವನೆಗೆ ನೀಡುತ್ತಾರೆ. ಬಾಣಂತಿಯರಷ್ಟೇ ಅಲ್ಲ ಮುದುಕರು, ಮಕ್ಕಳು ಮರಿ ಎಲ್ಲರೂ ಆಗಾಗ ತುಸುತುಸು ಈ ಟಾನಿಕ್ ಕುಡಿಯಬಹುದು. ಇದರ ಔಷಧ ಗುಣ, ಆಹಾರ ಗುಣವನ್ನರಿತ ಔಷಧ ಕಂಪನಿಗಳು ಇದರ ಗಡ್ಡೆಗಳನ್ನು ಸಿಕ್ಕಾಪಟ್ಟೆ ಬಳಸಿದರು. ಮೂಲಿಕೆ ತರುವವರು ಇದರ ಮೂಲಿಕೆಗಳನ್ನು ಎರ್ರಾಬಿರಿ ಕಿತ್ತು ತಂದು ಈ ಕಂಪನಿಗಳಿಗೆ ಕಡಿಮೆ ಬೆಲೆಗೆ ಮಾರಿದರು. ಹೀಗಾಗಿ ಇದರ ಸಂತಾನ ಈಗ ವಿನಾಶದ ಅಂಚಿನಲ್ಲಿದೆ.

ಈ ನಡುವೆ ಬ್ರೆಜಿಲ್ ಕಡೆಯಿಂದ ಇದರ ಕುಟುಂಬದ ಇನ್ನೆರಡು ವಿಧದ ನರಿಕಬ್ಬುಗಳು ಕರ್ನಾಟಕಕ್ಕೆ ವಲಸೆ ಬಂದವು, ವಿದೇಶದಿಂದ ಬಂದ ಇವು ಅಲ್ಲಿಯ ಸ್ಥಳೀಯ ಹೆಸರನ್ನು ಜೊತೆಗೆ ತರಲಿಲ್ಲ. ಸಸ್ಯವಿಜ್ಞಾನಿಗಳು ಇವುಗಳನ್ನು ಕೊಸ್ಟಸ್ ಇಗ್ನೇಸಿಯಸ್ ಎಂದು ಗುರುತಿಸಿದ್ದರು. ಈ ಹೆಸರು ನಮ್ಮ ನಾಲಿಗೆಗೆ ಒಗ್ಗಲಿಲ್ಲ. ಯಾರೋ ಇದನ್ನು ಇನ್ಸುಲಿನ್ ಗಿಡ ಎಂದರು. ತಮ್ಮ ಸಕ್ಕರೆ ಕಾಯಿಲೆಯಿಂದಾಗಿ ಚಿಂತೆಗೀಡಾಗಿದ್ದ ಮುಗ್ಧರು ಇದು ಸಕ್ಕರೆ ಕಾಯಿಲೆ ನೀಗುತ್ತದೆ. ನಿಜ ಎಂದರು. ಹಲವು ಮಾಧ್ಯಮಗಳಲ್ಲಿ ಜಾಹೀರಾತು ಹಬ್ಬಿತು. ಕರ್ನಾಟಕದಲ್ಲಿ ಮಧುಮೇಹಿಗಳ ಮನೆಮನೆಗಳಲ್ಲಿ ರೋಗಿಗಳ ಸಂಖ್ಯೆಗೂ ಮೀರಿದ ಸಂಖ್ಯೆಯ ಗಿಡಗಳು ಅವರವರ ತೋಟ

ಕುಂಡಗಳಲ್ಲಿ ಬೇರೂರಿಸಿಕೊಂಡವು.

[ಇನ್ಸುಲಿನ್ ಗಿಡ ಇದು ಅನುಭವ ಜನ್ಯ ಶಬ್ದ ವಲ್ಲ. ಅನುಭವಜನ್ಯ ಔಷಧವಲ್ಲ. ಇದರ ಎಲೆಯು ರುಚಿಯಲ್ಲಿ ಹುಳಿ. ನಮ್ಮ ನರಿಕಬ್ಬು ಚಪ್ಪೆ ರುಚಿಯದು. ಇದು ಹುಳಿ ನರಿಕಬ್ಬು. ಸಕ್ಕರೆ ಕಾಯಿಲೆಯವರು ನಿತ್ಯ ಈ ಹುಳಿ ನರಿಕಬ್ಬಿನ ಒಂದೆರಡು ಎಲೆಯನ್ನು ತಿನ್ನುತ್ತಿದ್ದಾರೆ. ನಾವು ನಿರೋಗಿಗಳು ಕೂಡ ಇದರ ಎಲೆ ತಿನ್ನಬಹುದು. ಚಟ್ನಿಹುಳಿ, ಸಾಂಬಾರ್‌ಗಳಲ್ಲಿ ಬಳಸಬಹುದು.]

ಇನ್ಸುಲಿನ್ ಬಗ್ಗೆ ಬರೆಯುವಾಗ ವಿದೇಶಿ ಮೂಲದ ಪಾರ್ತೇನಿಯಮ್ ಯುಪಿಟೊರಿಯಮ್‌ಗಳ ನೆನಪಾಯಿತು. ಈ ಹೆಸರುಗಳೂ ನಮ್ಮ ಜನರ ನಾಲಿಗೆಗೆ ಹೊಂದಲಿಲ್ಲ. ಸುಲಿದ ಬಾಳೆಯ ಹಣ್ಣಿನಂತೆ ಲಲಿತವಹ ಕಸ್ತೂರಿ ಕನ್ನಡವೆಲ್ಲಿ? ಈ ಲೆಟಿನ್ ಮೂಲದ ಸಸ್ಯಶಾಸ್ತ್ರೀಯ ಶಬ್ದಗಳೆಲ್ಲಿ? ಅಂತೂ ಇವಕ್ಕೆ ಹೊಸ ಹೆಸರಿಡುವದಕ್ಕೆ ಧೈರ್ಯ ಮಾಡಿದವರು ರಾಜಕೀಯದವರು. ಒಂದನ್ನು ಕಮ್ಯುನಿಸ್ಟ್ ಗಿಡ ಎಂದರು. ಇನ್ನೊಂದಕ್ಕೆ ಇನ್ನೊಂದು ಪಕ್ಷದವರು ಕಾಂಗ್ರೆಸ್‌ಗಿಡವೆಂದು ಹೆಸರಿಟ್ಟು ಸೇಡು ತೀರಿಸಿ ಕೊಂಡರು. ಇತ್ತ ವಿಜ್ಞಾನಿಗಳು ಈ ಗಿಡಗಳ ಕೆಡಕುಗಳನ್ನು ಬಾರಿಬಾರಿ ಪತ್ರಿಕೆಗಳಲ್ಲಿ ಬರೆದು ಪ್ರಚುರಪಡಿಸಿದರು. ಇವಕ್ಕೆಲ್ಲ ನಮ್ಮ ಜಾನಪದರು ಸೊಪ್ಪು ಹಾಕಲಿಲ್ಲ. ಈ ವಿಜ್ಞಾನಿಗಳು ಬರೆದದ್ದು ಇವರ ಕಿವಿಯ ಮತ್ತು ಕಣ್ಣಿನ ತನಕ ಮುಟ್ಟಿದರಲ್ಲವೇ; ಸೊಪ್ಪು ಹಾಕುವದು? ಇತ್ತೀಚಿನ ದಿನಗಳಲ್ಲಿ ಯುಪಿಟೊರಿಯಮ್ ಟ್ರಿಬಲ್ ನರ್ವ ಗಿಡವು ರೈತನ ದನಗಳ ಕೊಟ್ಟಿಗೆಗೆ ಸೊಪ್ಪಾಗಿದೆ; ಗದ್ದೆಗೆ ಗೊಬ್ಬರವಾಗಿದೆ. ಜಾನಪದರು ಹೊಸ ಶೋಧ ಮಾಡಿದ್ದಾರೆ. ಈ ಸೊಪ್ಪಿನ ಹಾಸಿಗೆಯ ಮೇಲೆ ಮಲಗುವ ದನಕರಗಳಿಗೆ ಅವುಗಳ ಮೈಮೇಲೆ ಮನೆ ಮಾಡಿ ಅಲ್ಲಿಯ ರಕ್ತ ಹೀರಿ ಬದುಕುವ ಉಣಗುಗಳ ಕಾಟ ಕಡಿಮೆಯಂತೆ. ಇದರ ಎಲೆರಸ ಮನುಷ್ಯರ ಹಸಿ ಗಾಯಕ್ಕೆ ಉತ್ತಮ ಮುಲಾಮಂತೆ, ತೆಂಗಿನ ಮರಕ್ಕೆ ಈ ಸೊಪ್ಪು ಹಾಕಿದರೆ ನುಸಿರೋಗ ಕಡಿಮೆಯಂತೆ ಈ ಅನುಭವ ವೈದ್ಯ ಸದ್ಯ ಕರಾವಳಿ

ಭಾಗದಲ್ಲಿ ಪ್ರಚಾರದಲ್ಲಿದೆ.

ಹಂದಿಗೆಂಡೆ ಇದು ಬುಡಕಟ್ಟು ಜನರಲ್ಲಿ ಹೆಚ್ಚು ಪರಿಚಿತವಾಗಿದೆ. ಉತ್ತರಕನ್ನಡ ಜಿಲ್ಲೆಯ ಅಂಕೋಲಾದ ಹಿಂದಿನ ತಲೆಮಾರಿನ ನಾಡವರು ಮತ್ತು ಹಾಲಕ್ಕಿ ಒಕ್ಕಲು ಇದನ್ನು ಮಚಲೆ ಸೊಪ್ಪು ಎನ್ನುತ್ತಾರೆ. ಇದರ ಸೊಪ್ಪನ್ನು ಪಲ್ಯ ಮಾಡಿ ಸೇವಿಸುತ್ತಾರೆ. ಈಗಿನ ಕಾಲದ ಹಳ್ಳಿಗರೂ ಪಾಲಕ್ ಪನೀರಿಗೆ ಮಾರು ಹೋಗಿರುವಾಗ ಕಾಡುಗಳು ಅರಣ್ಯ ಇಲಾಖೆಯ ಆಧಿಪತ್ಯದಲ್ಲಿರುವಾಗ ಮಚಲೆ ಸೊಪ್ಪನ್ನು ಅಡುವ ಕಲೆ ತಾಯಿಂದ ಮಗಳಿಗೆ ಸಾಗುವ ಅವಕಾಶವೇ ಇಲ್ಲದಿರುವಾಗ ಮಚಲೆ ಸೊಪ್ಪನ್ನು ತರುವವರು ಯಾರು? ಮಚಲೆ ಸೊಪ್ಪಿನ ಪಲ್ಯ ಅಡುವವರು ಯಾರು? ಮುಂದಿನ ದಿನಗಳಲ್ಲಿ ಈ ಕಾಡಿನಆಹಾರ ಜ್ಞಾನದ ಜೀವ ಉಳಿಯದು. ಇದು ನಿಸ್ಸಂದೇಹ.

ಹೊನ್ನಾವರದ ಹಳ್ಳಿಗರು ಯಕ್ಷಗಾನದ ಭೀಮನ ಗದೆಯಂತೆ ಕಾಣುವ ಇದರ ಗಡ್ಡೆಯ ಮೇಲೆ ಕಣ್ಣಿಡುತ್ತಾರೆ. ಇದು ಗಡ್ಡೆಯಲ್ಲ. ಗಡ್ಡೆಯಂತೆ ಕಾಣುವ ಕಾಂಡ ಹಳ್ಳಿಗರ ಭಾಷೆಯಲ್ಲಿ ಗೆಂಡೆ. ಇವರು ಗುರುತಿಸಿರುವ ಈ ಗಡ್ಡೆಯು ಹಂದಿಗಳಿಗೆ ಆಹಾರವಾಗಿರುತ್ತದೆ. ಸೂಕ್ಷ್ಮ ನಿರೀಕ್ಷಣಾ ಶಕ್ತಿಯುಳ್ಳ ಇವರು ಹಂದಿಗೆ ಪ್ರಿಯವಾದ ಈ ಗಡ್ಡೆಯನ್ನು ಹಂದಿಗೆಂಡೆಯೆಂದು ಕರೆದು ಸಂತೋಷಪಟ್ಟಿದ್ದಾರೆ. ಟೆನಿಸ್ ಚೆಂಡಿನಷ್ಟಿರುವ ಮೋಹಕ ಕಡುಗುಲಾಬಿ ಬಣ್ಣದ ಇದರ ಹಣ್ಣು ತಿನ್ನಲು ಯೋಗ್ಯವಲ್ಲ ತಿಂದರೆ ವಾಂತಿಯಾದೀತು. ಇದಕ್ಕೆ ಪರಿಹಾರವಿದೆ. ಚಿಟಿಕೆ ಉಪ್ಪು ಸೇರಿಸಿ ಮಜ್ಜಿಗೆ ಕುಡಿಯಿರಿ ವಾಂತಿ ನಿಲ್ಲುತ್ತದೆಯೆನ್ನುತ್ತಾರೆ,

ಇಲಿಕಿವಿಸೊಪ್ಪು ಇದು ಪ್ರಾಣಿಗಳ ಹೆಸರುಗಳನ್ನೊಳಗೊಂಡ ಔಷಧಿ ಸಸ್ಯಗಳ ಗುಂಪಿಗೆ ಸೇರುತ್ತದೆ. ಮಳೆಗಾಲದಲ್ಲಿ ಮನುಷ್ಯರನ್ನು ಕಾಡಿಸುವ ರಕ್ತ ಹೊರಕಡೆಗೆ ಇದು ಮದ್ದೆಂದು ತಿಳಿಯಲಾಗುತ್ತದೆ. ಈ ದಿನಗಳಲ್ಲಿ ಈ ಬಗ್ಗೆ ತಿಳಿದಿರುವ ಕರಾವಳಿಯ ಜನರು ಈ ರೋಗ ಊರು ಕೇರಿಗೆ ಕಾಲಿಡುವ ಮೊದಲೇಇದರ ತಂಬುಳಿ ಗೊಜ್ಜು ಮಾಡಿ

ಸೇವಿಸುತ್ತಾರೆ. ರೋಗ ನಿವಾರಣ ಕ್ರಮಕ್ಕಿಂತ ರೋಗ ಪ್ರತಿಬಂಧಕ ಕ್ರಮ ಮೇಲೆಂದು ಮನೆಮದ್ದುಗಾರರ ತಿಳುವಳಿಕೆ.

ಸಸ್ಯ ಫಲವನ್ನು ಅನುಲಕ್ಷಿಸಿ ಹುಟ್ಟಿದ ಹೆಸರು ಗಜಲಿಂಬೆ. ಈ ಹೆಸರು ಇತರ ಸಾಮಾನ್ಯ ಲಿಂಬೆಯೊಂದಿಗೆ ಹೋಲಿಕೆಗೊಂಡು ಸಾಮಾನ್ಯ ಲಿಂಬೆಗಿಂತ ತುಸು ದೊಡ್ಡದಾಗಿ ಕಂಡಾಗ ಹುಟ್ಟಿದ ಹೆಸರಾಗಿದ್ದರೂ ಇದು ಹೆಸರಿಟ್ಟವರ ವೈಭವೀಕೃತ ಕಲ್ಪನೆಗೆ ಉದಾಹರಣೆಯಾಗಿದೆ. ಜನಸಾಮಾನ್ಯರು ಮಾತಾಡುವಾಗ ಆನೆಯಷ್ಟು ದೊಡ್ಡ ಎಂಬ ಶಬ್ದವನ್ನು ಆಗಾಗ ಬಳಸುವದನ್ನು ಗಮನಿಸುತ್ತೇವೆ. ಆನೆಯನ್ನು ವಿಶೇಷಣವಾಗಿಟ್ಟುಕೊಂಡು ಕನ್ನಡದಲ್ಲಿ ಹಾಗೂ ಸಂಸ್ಕೃತದಲ್ಲಿ ಹಲವಾರು ಸಸ್ಯನಾಮಗಳು ಜಾರಿಯಲ್ಲಿವೆ. ಇತರ ಭಾಷೆಯಲ್ಲಿಯೂ ಇಂತಹ ಪ್ರಕ್ರಿಯೆ ನಡೆದಿದೆ. ಮಾನವ ಮನಸ್ಸು ಎಲ್ಲಿದ್ದರೂ ಸಮಾನ ಅಂಶಗಳನ್ನು ಹೊಂದಿರುತ್ತದೆ ಎಂಬ ಅನುಭವಿಕರ ನುಡಿಗೆ ಇಲ್ಲಿ ಸಾಕ್ಷ್ಯ ದೊರೆಯುತ್ತದೆ. ಸಂಕನ್ನಡದ ಗಜಹಿಪ್ಪಲಿ ಕನ್ನಡದ ಆನೆತಗಟೆ, ಆನೆಕಿವಿ, ಆನೆಹೆಜ್ಜೆ ಆನೆಗುಲಗುಂಜಿ ಆನೆಜೊಂಡು ಆನೆತುರುಚಿ ಆನೆಪಾದ ಆನೆಪುಂಗು ಆನೆಸೊಗದೆ ಆನೆಹಂಬು ಇತ್ಯಾದಿ.

ಪ್ರಾಣಿಗಳ ಅಂಗಾಂಗಗಳನ್ನು ಹೋಲುವ ಸಸ್ಯಾಂಗಗಳನ್ನು ಹೊಂದಿರುವ ಈ ಗಿಡಗಳು ಆಯಾ ಪ್ರಾಣಿಗಳ ಅಂಗಾಂಗಗಳ ಹೆಸರಿಂದಲೇ ಗುರುತಿಸಲ್ಪಡುತ್ತವೆ. ಉದಾ ಕುದುರೆಬಾಲದ ಬಳ್ಳಿ, ಕುದುರೆ ಸೊಟ್ಟಿ, ನರಿಬಾಲ, ಹಾವು ಕಣ್ಣಿನ ಗಿಡ, ಇತ್ಯಾದಿ.

ಹಾವು ಗಂಧ, ಹಾವು ನಂಜು ಗಿಡ, ಹಿರಿ ಹಾವಿನ ಬಳ್ಳಿ, ಬುಕ್ರಿನ ಬಳ್ಳಿ, ಇವು ಹಾವಿನ ವಿಷಕ್ಕೆ ಸಂಬಂಧಪಟ್ಟ ಗಿಡ ಬಳ್ಳಿಗಳ ಹೆಸರುಗಳಾಗಿವೆ. ಅಂಕೋಲೆಯ ಹಾಲಕ್ಕಿ ಒಕ್ಕಲು ಬಲ್ಲ ಹಿರಿ ಹಾವಿನ ಬಳ್ಳಿ, ಅಲ್ಲಿ ಹಾವಿನ ವಿಷಕ್ಕೆ ಮದ್ದಾಗಿ ಬಳಕೆಯಲ್ಲಿದ್ದರೆ ಸಿರ್ಸಿಯ ಬೈರುಂಬೆ ಮತ್ತು ನರೂರಿನ ಪಶುಪಾಲಕರು ಇದು ದನಗಳಿಗೆ ಉತ್ತಮ ಸೊರವು ನೀಡುತ್ತದೆ. ಅಂದರೆ ಇದು ಕರೆಯುವ ದನಗಳ ಹಾಲು ಹೆಚ್ಚಿಸಲು ಸಹಕಾರಿ ಎನ್ನುತ್ತಾರೆ. ಆದ್ದರಿದ ಇದು ಸೊರವಿನ ಬಳ್ಳಿ.

ಈ ಬಳ್ಳಿಯನ್ನು ಕೊಚ್ಚಿ ಅದಕ್ಕೆ ಅನ್ನ ಬೆಲ್ಲ ಬೆರೆಸಿ ಹೈನದ ದನಗಳಿಗೆ ತಿನ್ನಲು ಕೊಡುವದು ಅಲ್ಲಿ ತಲೆಮಾರುಗಳಿಂದ ನಡೆದು ಬಂದ ಪದ್ಧತಿ.

ಬುಕ್ರಿನ ಬಳ್ಳಿ, ಬುಕ್ರಿ ಎಂಬ ಹಾವಿನ ವಿಷಕ್ಕೆ ಮದ್ದು. ಕಂದೀಲು ಮಾದರಿಯ ಹೂವನ್ನು ಬಿಡುವ ಇದು ಆಡು ಮುಟ್ಟದ ಬಳ್ಳಿಯ ಕುಟುಂಬಕ್ಕೆ ಸೇರಿದೆ.

ಆಡು ವಿಶೇಷಣವಾಗಿರುವ ಅನೇಕ ಸಸ್ಯನಾಮಗಳು ಕೂಡ ಔಷಧ ಗಿಡಗಳಿಗೆ ಸಂಬಂಧ ಪಟ್ಟ ಹೆಸರಾಗಿರುವದನ್ನು ಇಲ್ಲಿ ಗಮನಿಸಬೇಕು ಆಡುಮುಟ್ಟದ ಬಳ್ಳಿಯ ಎಲೆ ದಮ್ಮಿನ ರೋಗಕ್ಕೆ ಮದ್ದು. ಆಯುರ್ವೇದದಲ್ಲಿ ವೈದ್ಯರ ತಾಯಿ ಎಂದು ಹೊಗಳಿಸಿಕೊಂಡ. ಆಡುಮುಟ್ಟದ ಗಿಡದ ಎಲೆ ಕಫಾದಿ ಶ್ವಾಸ ಸಂಬಂಧಿತ ರೋಗಗಳಿಗೆ ಮದ್ದು.

[ಜಾನಪದರು ಕೇವಲ ಔಷಧ ಗಿಡಗಳಿಗೆ ಮಾತ್ರ ಹೆಸರಿಟ್ಟಿದ್ದರೆಂದು ತಿಳಿಯಲಾಗದು] ಗಿಡಮರಗಳನ್ನು ಗುರುತಿಸುವದಕ್ಕೆ ಆಯಾ ಗಿಡಮರಗಳ ಪ್ರಯೋಜನ ದೃಷ್ಟಿಯೊಂದೆ ಕಾರಣವಲ್ಲ. ತಮ್ಮ ಸುತ್ತಮುತ್ತಲಿನ ಗಿಡಮರಗಳ ಬಗ್ಗೆ ತಿಳಿಯುವಾಗ ಅವುಗಳ ಹೆಸರು ಗೊತ್ತಿರಬೇಕೆಂಬುದು ಜಾನಪದರ ಅಭಿಪ್ರಾಯವೆಂದುಕೊಂಡಿದ್ದೇನೆ. ದಾರಿಯ ಮೇಲೆ ತಿರುಗಾಡುವ ಎಲ್ಲರ ಹೆಸರು ನಮಗೆ ಬೇಡ ನಿಜ. ಆದರೆ ದಿನ ಬೆಳಗಾದರೆ ಮುಖಕ್ಕೆ ಮುಖ ಹಾಕಿ ಎದುರೆದುರಿಗೆ ಕಾಣುವ, ನಡೆಯುವಾಗ ಎಲ್ಲೆಂದರಲ್ಲಿ ನಮ್ಮ ಕಾಲಿನಿಂದ ಮೆಟ್ಟಿಸಿ ಕೊಳ್ಳುವ ಹಾಗೆಯೇ ಒಣಗಿ ಹೋಗುವಾಗ ನಮಗೊಂದು ಮಾತನ್ನು ಹೇಳದೆ ಮಣ್ಣಿನಲ್ಲಿ ಮಣ್ಣಾಗಿ ಹೋಗುವ ನಾವು ಯಕಃಚ್ಛಿತ್ ಕಳೆಗಳು ಹುಲ್ಲುಗಳು ಎಂದು ಒಂದೆ ಶಬ್ದದ ಹೆಸರಿನಡಿಯಲ್ಲಿ ಗುರುತಿಸಿರುವ ಬಹುಸಂಖ್ಯೆಯ ಸಸ್ಯಸಂಕುಲಗಳು ಜಾನಪದರ ನಡುವೆ ಹೆಸರಾಂತು ತಲೆಯೆತ್ತಿ ಬಾಳುತ್ತಿವೆ. ಹೆಸರನ್ನಷ್ಟೇ ಅಲ್ಲ ಎಲ್ಲಿಯೂ ದಾಖಲೆಯಾಗದ ಅವುಗಳ ಬಯೊಗ್ರಫಿಯನ್ನು ಅಷ್ಟೇ ಏಕೆ, ಅದರ ಸುಲಲಿತ ಸಂಪೂರ್ಣ ಜಾನಪದವನ್ನು ಎಗ್ಗಿಲ್ಲದೆ ಕಣ್ಣಿಗೆ ಕಟ್ಟುವಂತೆ

ಜಾನಪದರು ನಿರೂಪಿಸಬಲ್ಲರು. ಅಲ್ಲಿ ಆಗೊಂದು ಸಸ್ಯ ಪಾಠಶಾಲೆ ತೆರೆದುಕೊಳ್ಳುತ್ತದೆ.

೧೬. ನಿಮಗೆ ಗೊತ್ತೆ? ಮನುಷ್ಯರಿಗಿರುವಂತೆ ಕೆಲವು ಗಿಡಗಳಿಗೆ ಪತ್ತೆಸರುಗಳಿರುತ್ತವೆ. ನಮ್ಮ ನಾಡ ವೈದ್ಯರಲ್ಲಿ ಗಿಡದ ಹೆಸರು ಹೇಳಿದರೆ ಆ ಗಿಡದ ಮದ್ದಿನ ಗುಣ ಕಡಿಮೆಯಾಗುತ್ತದೆಯೆಂಬ ನಂಬಿಕೆಯಿದೆ. [ನಮ್ಮ ಗಂಡುಳ್ಳ ಗರತಿಯರು ಇದೇ ಕಾರಣದಿಂದ ಅಂದರೆ ಗಂಡನ ಹೆಸರನ್ನು ಹೇಳಿದರೆ ಗಂಡನ ಆಯುಷ್ಯ ಕಡಿಮೆಯಾಗುತ್ತದೆಯೆಂಬ ನಂಬಿಕೆಯನ್ನು ಪಾಲಿಸುತ್ತಾರೆ. ತಹಶೀಲದಾರ ಆಫೀಸಿಗೆ ಹೋದಾಗ ಗಂಡನ ಹೆಸರು ಹೇಳುವ ಸಂದರ್ಭ ಬರಬಹುದೆಂದುಕೊಂಡು ಬಸ್ ಖರ್ಚು ಕೊಟ್ಟು ತಮ್ಮ ಪರವಾಗಿ ಗಂಡನ ಹೆಸರನ್ನು ಹೇಳಲು ಜೊತೆಗೊಬ್ಬರನ್ನು ಕರೆದೊಯ್ಯುವುದುಂಟು. ಯಾಕೆಂದರೆ ಅಲ್ಲಿ ಪತ್ತೆಸರು ನಡೆಯುವದಿಲ್ಲ. ಆದರೆ] ನಮ್ಮ ನಾಡವೈದ್ಯರು ತಾವು ಬಳಸುವ ಕೆಲವು ಗಿಡಗಳಿಗೆ ಪತ್ತೆಸರಿಟ್ಟಿದ್ದಾರೆ. ಅವುಗಳಲ್ಲಿ ಕೋಲ್ಮದ್ದು ಬೇರ್ಮದ್ದುಗಳನ್ನು ಉದಾಹರಿಸಬಹುದು. ನಾಡ ವೈದ್ಯರ ಹಿಂದಿನ ಯಾವುದೋ ತಲೆಮಾರಿನವರು ಇಟ್ಟ ಈ ಹೆಸರು ಅವರ ಮುಂದಿನ ಪೀಳಿಗೆಯವರಿಗೆ ಅದರ ಮೂಲ ಹೆಸರನ್ನು ಮರೆಸಿ ಬಿಟ್ಟಿತು. ಈ ಪತ್ತೆಸರೇ ನಿಜನಾಮವಾಗಿ ಗಿಡ ಯಾವುದೆಂಬುದನ್ನು ಹೇಳ ತೊಡಗಿತು. ಹೀಗಾಯ್ತು ಪತ್ತೆಸರಿನ ಹಣೆಬರೆಹ.

ಮತ್ತೆ ಕೆಲವರಿಗೆ ಗಿಡ ಗೊತ್ತು. ಅದಕ್ಕೆ ಸಂಬಂಧಿಸಿದ ಆಚರಣೆ ಗೊತ್ತು. ಆದರೆ ಆ ಗಿಡದ ಹೆಸರೇ ಗೊತ್ತಿಲ್ಲ. ಅಂತಹದ್ದೊಂದು ಉದಾಹರಣೆ ಮೆಗಾ ಸಿಟಿ ಬೆಂಗಳೂರಿನಲ್ಲಿಯೂ ಲಭ್ಯ. ಬೆಂಗಳೂರಿನಲ್ಲಿ ನೀವು ಕ್ಷೌರ ಮಾಡಿಸಿಕೊಳ್ಳಲು ಕ್ಷೌರದಂಗಡಿಯನ್ನು ಹುಡುಕಿಕೊಂಡು ಹೊರಡುತ್ತೀರಿ. ಅಂಗಡಿಯ ಹೆಸರನ್ನು ಹುಡುಕಲು ಮೇಲೆ ಬೋರ್ಡ್ ಹುಡುಕುವ ಅವಶ್ಯಕತೆಯಿಲ್ಲ. ಕೆಳಗೆ ನೆಲದಲ್ಲಿ ನಿಮ್ಮ ಕಾಲ ಬಳಿ ನೋಡಿ ಒಂದು ಹಳೆಯ ಡಬ್ಬದಲ್ಲೋ ಕುಂಡದಲ್ಲೋ ಅದು ಬಿರಿಯುವಂತೆ ಒತ್ತಾಗಿ ಬೆಳೆದಿರುವ ಗಿಡಗಳ ಹಿಳ್ಳೆಪಿಳ್ಳೆಗಳ ಸಮೂಹ ಕಾಣುತ್ತದೆ.

ಹಾಂ ಅದೇ ನೀವು ಹುಡುಕಿಕೊಂಡು ಹೋಗಿರುವ ಅಂಗಡಿ. ನೀವು ಆಗಾಗ ಭೆಟ್ಟಿಯಿತ್ತು ನಿಮಗೆ ಪರಿಚಿತನಾಗಿರುವ ಈ ಅಂಗಡಿಯ ಮಾಲೀಕನನ್ನೇ ಕೇಳಿ "ಇದೇನು ಗಿಡ? ಇಲ್ಲಿ ಯಾಕೆ ನೆಟ್ಟಿದ್ದೀರಿ?" "ಹಿರಿಯರು ನೆಟ್ಟಿದ್ದರು. ನಾವು ನೆಟ್ಟಿದ್ದೇವೆ ನಮಗೆ ಇದರ ಹೆಸರು ಗೊತ್ತಿಲ್ಲ" ಅನ್ನುತ್ತಾರೆ. ಇದು ಕ್ರೈನಮ್ ಗುಂಪಿಗೆ ಸೇರಿದ ಗಿಡ. ಇಸ ಮುಂಗಲಿಗಿಂತ ತುಸು ಬೇರೆ. ಇಸ ಮುಂಗಲಿಯ ಎಲೆ ದಟ್ಟ ಹಸಿರು, ಅಗಲ, ಇದರ ಎಲೆ ಸಪುರ ಗಿಳಿಹಸುರು. ಎಲೆಯ ಉದ್ದದ ಗುಂಟ ಉದ್ದದ ಬಿಳಿ ಹಸುರು ಬಣ್ಣ ಮಿಶ್ರಿತ ಗೆರೆಗಳು. (ಬೆಂಗಳೂರಿನ ಕ್ಷೌರಿಕರಂಗಡಿಯ ಅಂಗಳದಿಂದಲೆ ಒಂದು ಪಿಳ್ಳೆಯನ್ನು ತಂದು ನಮ್ಮ ಮನೆಯಂಗಳದಲ್ಲಿ ನೆಟ್ಟಿದ್ದೇನೆ. ತುಂಬ ಮರಿಯೊಡೆದಿದೆ.) ಹಳೆಯ ತಲೆಮಾರಿನ ಇವರ ಹಿರಿಯರು ಇದರ ರಕ್ತ ನಿಲ್ಲಿಸುವ ಅಮೂಲ್ಯ ಗುಣವನ್ನು ಅರಿತಿದ್ದರು. ಹೊತ್ತಿಗೆ ಸರಿಯಾಗಿ ಕೈಗೆ ಸಿಗಲಿ ಎಂಬ ಉದ್ದೇಶದಿಂದ ತಮ್ಮ ಅಂಗಡಿಯ ಅಂಗಳದಲ್ಲಿ ಇದನ್ನು ಪೋಷಿಸಿ ಕೊಂಡಿದ್ದರು. ಆದರೆ ಟ್ಯೂಬುಗಳಲ್ಲಿ ರಕ್ತನಿರೋಧಕ, ಗಾಯ ಮಾಯಕ, ಮದ್ದುಗಳು ಆಧುನಿಕ ಔಷಧದಂಗಡಿಗಳಿಗೆ ಬಂದ ಮೇಲೆ ಈ ಗಿಡದ ಪ್ರಯೋಜನ ಮುಂದಿನವರಿಗೆ ಮರೆತು ಹೋಯಿತು. ಆದರೂ ತಮ್ಮ ಹಿರಿಯರ ಜ್ಞಾನದ ಆಸ್ತಿಯ ಕುರುಹಾಗಿ ಇವರು ಈ ಗಿಡವನ್ನು ಉಳಿಸಿಕೊಂಡಿರುವದು ಮೆಚ್ಚುವಂತಹದ್ದು. (ಅನೇಕ ಅಲಂಕಾರಿಕ ಗಿಡ ಪ್ರಿಯರು ಇದನ್ನು ತಮ್ಮ ಹೂದೋಟಗಳಲ್ಲಿ ಬೆಳೆಸಿಕೊಂಡಿದ್ದಾರೆ. ಇದು ಔಷಧ ಗಿಡವೂ ಅಹುದು ಎಂದು ತಿಳಿದಾಗ ಔಷಧಿ ಗಿಡ ಪ್ರಿಯರು ತಮ್ಮ ಮನೆಯ ಕುಂಡದಲ್ಲಿ ಇದಕ್ಕೆ ಸ್ಥಾನ ನೀಡಿಯಾರು. ನೆಟ್ಟವರು ಇನ್ನಷ್ಟು ಮುತುವರ್ಜಿ ವಹಿಸಿ ಇದರ ಆರೈಕೆ ಮಾಡಿಯಾರು.)

೧೭. ಸಸ್ಯಜ್ಞಾನ ಸರ್ವರ ಸೊತ್ತು. ಈ ಸಸ್ಯ ಜ್ಞಾನ ಶ್ರೀಮಂತಿಕೆ ಒಬ್ಬರಲ್ಲಿ ಹೆಚ್ಚಿರಬಹುದು. ಇನ್ನೊಬ್ಬರಲ್ಲಿ ಕಡಿಮೆಯಿರಬಹುದು. ಜ್ಞಾನದ ನೀತಿಯೇ ಹಾಗೆ. ಒಬ್ಬೊಬ್ಬರೊಳಗೊಂದು ನುಡಿಗಲಿತು ಸರ್ವಜ್ಞ ವಿದ್ಯದ ಪರ್ವತವೇ ಆದನಂತೆ. ಈ ರೀತಿಯನ್ನು ಇಲ್ಲಿಯೂ ಅಳವಡಿಸಿ ಕೊಳ್ಳಬಹುದು. ಅಪ್ಪಟ ಸಸ್ಯನಾಮದ ಜೊತೆ ಅವುಗಳ

ಅಪ್ಪಟ ಸಸ್ಯ ಜಾನಪದ ಪಡೆಯಲು ಪ್ರಯತ್ನ ಬೇಕು. ಜ್ಞಾನಿ ಗುರುವನ್ನು ಹುಡುಕುತ್ತ ನಡೆಯಬೇಕು. ಅವರೆಲ್ಲಿದ್ದಾರೆ? ಮೇಲೆ ಬರೆದು ತಿಳಿಸಿದಂತೆ ಸದಾ ಕಾಡುಮೇಡು ಗದ್ದೆ ಹೊಲ ತೋಟಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ಜನರ ಬಳಿ ಯಾರೂ ಮುಟ್ಟದ ಯಾರೂ ದಾಖಲಿಸಿಲ್ಲದ ಮಾಹಿತಿಯಿರುತ್ತದೆ. ಅಲ್ಲಿರುವ ಗಿಡಮರ ಸಸ್ಯಗಳ ಅಚ್ಚಗನ್ನಡದ ಹೆಸರುಗಳೊಂದಿಗೆ ಸಸ್ಯಜ್ಞಾನ ಅವರ ಬಳಿ ಕನ್ಯಾವಸ್ಥೆಯಲ್ಲಿರುತ್ತದೆ. ಸಾಮಾನ್ಯವಾಗಿ ಬುಡಕಟ್ಟುಗಳಲ್ಲಿ ದೊರಕುವ ಕಾಡಿನ ಆಹಾರ ಬೆಳೆಯ ಜ್ಞಾನವಂತೂ ಅದ್ಭುತ. ಪರಿಮಳ ಭರಿತ ಪಾನೀಯವನ್ನು ನೀಡುವ ಬಂದಾರೆ ಸೊಪ್ಪು, ಮಸೆ ಸೊಪ್ಪು, ದೋಸೆ ಮಾಡಲು ಬಳಸುವ ಜಾಂಬಳಿಗೆಂಡೆ, ಸಿಹಿಗೆಣಸಿನಂತೆ ಕುದಿಸಿ ತಿನ್ನಬಹುದಾದ ಜಾಬಲಿಗೆಂಡೆ, ಮುರಸಲಗೆಂಡೆ, ಪಾಯಸಮಾಡಿ ಸೇವಿಸಬಹುದಾದ ತೆರ್ಲಕಾಯಿ, ದುರಕಲು, ನೆಪ್ಪಿನಬಳ್ಳಿ, ಚಿಕ್ಕ ನೇರಳೆ ಹಣ್ಣು ನೀಡುವ ಪೆಪೆ, ವಾಯುಪ್ರಕೋಪ ದೂರಮಾಡುವ ಬಂಗಡೆ ಬೀಜ, ಎಣ್ಣೆ ಕಾಳುಗಳಾದ, ಇಪ್ಪೆ; ಬೊಬ್ಬೆ. ಮುರಗಲಗಳು, ಹಸಿಯಾಗಿ ಬಾಯಿಗಿಟ್ಟು ಜಗಿದು ತಿನ್ನಬಹುದಾದ ಪಿನ್ನಿಗೆಂಡೆ, ಕಾವಲಿಗೆಂಡೆ, ಚೀಪಿತಿನ್ನಬಹುದಾದ ಚಿರಕಲಹಣ್ಣು, ಮುಳ್ಳುಗುಜರ ಹಣ್ಣು. ಕರಿ ಬಿಳಿ ಮುಳ್ಳಣ್ಣು, ಬಾಯಲ್ಲಿ ನೀರೂರಿಸುವ ಕೆಂಪು ಬಣ್ಣದ ಚೆಂಪೇರಹಣ್ಣು ಒಂದೆ ಎರಡೆ, ನೂರಾರು ಕಾಡಿನ ಹಣ್ಣುಗಳ ಅಚ್ಚಗನ್ನಡ ಹೆಸರು ಮತ್ತು ಅವುಗಳ ಜಾನಪದ ಉಳಿಯುವದೆಂತು. ಉಳಿಸುವದೆಂತು ಉಳಿಸುವವರಾರು?

೧೮ ಹುಲ್ಲುಗಳಿಗೂ ಹೆಸರುಂಟು ಗುಡ್ಡ ಬೆಟ್ಟಗಳಲ್ಲಿ ಕೆಲಸ ಮಾಡುವ ಶ್ರಮಿಕರೊಂದಿಗೆ ಚಿಕ್ಕಚಿಕ್ಕ ಹುಲ್ಲುಗಳ ನಡುವೆ ಓಡಾಡಿದರೆ ಸಾಕು. ಕಣ್ಣಿಗೆ ಕಂಡ, ಕಾಲಿಗೆ ತೊಡಕಿದ ಈ ಹುಲ್ಲುಗಳ ವೈವಿಧ್ಯವನ್ನು ನಮಗೆ ತೋರಿಸುತ್ತ ಇದು ಅಂಬುಗೋಲಿ, ಇದು ಕಡಕೇರಿ, ಇದು ಕರಡ ಇದು ಗೊಂಡೆಗರಡ ಇದು ಕೋಲಿಹುಲ್ಲು ಇದು ಗುಬ್ಬಿಹುಲ್ಲು ಎಂದು ಲೀಲಾಜಾಲವಾಗಿ ಯಾವ ಅಡೆತಡೆಯಿಲ್ಲದೆ ಮರೆವಿಗೆ ಒಳಗಾಗದೆ ಹೇಳುತ್ತ ಸಾಗುವ ಜಾನಪದ ತಜ್ಞರು ನಮ್ಮ ನಡುವೆ ಬಾಳಿಕೊಂಡಿದ್ದಾರೆ.

ಇಂತವರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವಾನ್ವಿತೆ ಸುಕ್ರಿಯೂ ಒಬ್ಬರು. ಈ ಹುಲ್ಲುಗಳ ಹೆಸರೊಂದೇ ಅಲ್ಲ; ಇವುಗಳ ಬಯೋಗ್ರೆಫಿಯಾ ಇವರಿಗೆ ವಿವರವಾಗಿ ಗೊತ್ತು. ಅಂಬುಗೋಲಿಯು ಚೂಪಾದ ಮುಳ್ಳಿನಂತಹ ಕದರ(ತೆನೆ)ವನ್ನು ಹೊಂದಿರುತ್ತದೆ. ಇದು ಅಂಬು ಅಂದರೆ ಬಾಣದಂತಹ ತೆನೆಯುಳ್ಳ ಒಂದು ಬಗೆಯ ಕೋಲಿ ಎಂದು ನಾವು ಶಬ್ದದ ಸಮಾಸ ಬಿಡಿಸುವತ್ತ ಗಮನ ಹರಿಸಿದರೆ, ಸುಕ್ರಿ ಇದು ಸಾಮಾನ್ಯ ಹುಲ್ಲಲ್ಲ, ಹೆಂಗಸರ ಸೀರೆಗೆ, ಗಂಡಸರ ಕಚ್ಚೆಪಂಜೆಗೆ ತಾನು ಚುಚ್ಚಿಕೊಂಡು ಅವರ ಜೊತೆ ಕಾಡೆಲ್ಲ ತಿರುಗಿ ಊರಿಗೂ ಬಂದು ಬಿಡುತ್ತದೆ ಎನ್ನುತ್ತ ಅದರ ಚಾರಿತ್ರ್ಯವನ್ನು ಜಾಲಾಡಿಬಿಡುತ್ತಾರೆ. ಬಣ್ಣ ಉಟ್ಟವರ ಬಿಡ, ಚೆನ್ನ ತೊಟ್ಟವರ ಬಿಡ ಈ ಅಂಬುಗೋಲಿ ಎಂದು ಪ್ರಾರಂಭಿಸಿ ಅದರ ಪ್ರಕ್ರಿಯೆಯನ್ನು ಹಾಡಿನಲ್ಲಿಯೂ ಕಟ್ಟಿಕೊಡುತ್ತಾರೆ. ಮನೆಹೊದಿಕೆಗಾಗಿ ಇದನ್ನು ಸಂಗ್ರಹಿಸುವುದಾದಲ್ಲಿ ತುಳಸಿಹಬ್ಬ (ಕಾರ್ತಿಕಮಾಸ)ಗಳಿಯಬೇಕು. ಆಗ ಇದು ತನ್ನ ಅಂಬನ್ನು ಉದುರಿಸುತ್ತದೆ. ದನಕ್ಕೆ ಮೇವಾಗಿ ಬಳಸುವವರು ಇದನ್ನು ಮೊದಲೇ ಕೊಯ್ದು ಸಂಗ್ರಹಿಸಬೇಕು ಎನ್ನುತ್ತಾರೆ. ಹೀಗೆ ಸಾಗುತ್ತದೆ ಅನೇಕ ಕಿರುಸಸ್ಯಗಳ ಗುಣಗಾನ. ದೊರೆಯುತ್ತದೆ ಪ್ರತ್ಯಕ್ಷಜ್ಞಾನ.

(ಕರಾವಳಿಯಲ್ಲಿ ಬೆಟ್ಟಗುಡ್ಡಗಳಲ್ಲಿ ಬೆಳೆಯುವ ಇನ್ನೊಂದು ಹುಲ್ಲು ಬೆಳ್ಚಾ. ಬೆಳ್ಚಾ ಹೆಸರಿಗೆ ತಕ್ಕಂತೆ ಬೆಳ್ಳಗಿನ ತೆನೆಯುಳ್ಳದ್ದು ಹಂಸಗಳ ತುಪ್ಪಳದಂತೆ ಸುಂದರ; ಮೃದು.

ಗುಬ್ಬಿಹುಲ್ಲು ಆಕಾರದಲ್ಲಿ ಚಿಕ್ಕದು, ತೆನೆಯಲ್ಲಿಯ ಹೂ, ಕಾಳುಗಳು ಕಸಕಸೆಯಂತೆ ಕಾಣುತ್ತದೆ. ಈ ಹುಲ್ಲಿಗೆ ಈ ಹೆಸರು ಬರಲು ನಾವು ಇದರ ಚಿಕ್ಕ ಆಕಾರ ಕಾರಣವಿರಬಹುದೆಂದುಕೊಂಡರೆ ಅದು ಪೂರ್ಣಸತ್ಯವಲ್ಲ. ಸುಕ್ರಿ ಗುಬ್ಬಿಗಳು ಈ ಗುಬ್ಬಿಹುಲ್ಲಿನಿಂದಲೇ ತಮ್ಮ ಮನೆಕಟ್ಟುತ್ತವೆಯೆಂಬ ಅಪೂರ್ವ ಅನುಭವವನ್ನೊರೆಯುತ್ತಾರೆ.

ಒಮ್ಮೆ ನನ್ನ ಜೊತೆ ಬಯಲಿನಲ್ಲಿ ನಡೆಯುತ್ತಿದ್ದಾಗ ಸುಕ್ರಿ ಒಂದು ಜಾತಿಯ ಹುಲ್ಲಿನ ಉದ್ದದೇಟಿನ ಹತ್ತಾರು ಹೂ ತೆನೆಗಳನ್ನು

ಕೊಯ್ದುಕೊಂಡು ಕಟ್ಟಾಡೆ ಕುಟ್ಟಾಡೆ ಕಟ್ಟಿದ್ರೆ ಚೂಡಾಡೆ ಎಂದು ಮತ್ತೆ ಮತ್ತೆ ಹೇಳತೊಡಗಿದರು, "ಇದೇನು ಒಗಟಾ ಹೇಳು ಮತ್ತೆ ಎನ್ನುತ್ತಾ ನಾನು ಬರೆದುಕೊಳ್ಳಲೆಂದು ಪೆನ್ನೆತ್ತಿ ಕೊಂಡರೆ ಸುಕ್ರಿ ಮತ್ತೆ ಅದೇ ಹಾಡು "ಕಟ್ಟಾಡೇ ಕುಟ್ಟಾಡೆ ಕಟ್ಟಿದ್ರೆ ಚೂಡಾಡೇ" ಎಂದು ಹೇಳುತ್ತ ನನ್ನ ಮುಖ ನೋಡಿ ನಗತೊಡಗಿದರು. ಆಗ ನನ್ನ ತಲೆಯ ಟ್ಯೂಬ್‌ಲೈಟ್ ಹೊತ್ತಿಕೊಳ್ಳುತ್ತದೆ. ಈ ಹುಲ್ಲಿಗೆ ಇಷ್ಟುದ್ದದ, ಇಂಥಾ ಹೆಸರಾ? ಎಂದು ಪ್ರಶ್ನಿಸುತ್ತೇನೆ. ಹೌದು ಇದಕ್ಕೆ ಇಷ್ಟು ಉದ್ದದ ಹೆಸರಿದೆ ಎಂದು ತಿಳಿಸಿ, ಹೆಸರನ್ನು ಒಂದೊಂದಾಗಿ ವಿವರಿಸಿ ಹೇಳುತ್ತಾರೆ.

ಈ ಜನಪದ ಸಸ್ಯಶಾಸ್ತ್ರಜ್ಞೆ ಪ್ರತಿ ಹುಲ್ಲಿನ ಹೂತೆನೆ ನೋಡಿ ಸಸ್ಯಪ್ರಭೇದ ಗುರುತಿಸುವ ರೀತಿಗೆ ಬೆರಗುಗೊಳ್ಳುತ್ತೇನೆ. ಹುಲ್ಲು ತೆನೆ ಬಿಡುವ ಮೊದಲೇ ಅವುಗಳ ಪ್ರಭೇದ ಗುರುತಿಸುವ ಅಪೂರ್ವ ಜ್ಞಾನವೂ ಅವರಿಗಿದೆ. ಸುಕ್ರಿ ಬಲ್ಲ ಹುಲ್ಲುಗಳ ಪ್ರಪಂಚವೊಂದನ್ನೇ ಆರಿಸಿಕೊಂಡು ಅದನ್ನು ಅಕ್ಷರಕ್ಕಿಳಿದರೂ ಸಾವಿರ ಪುಟದ ಹೊತ್ತಿಗೆ ಸಿದ್ಧವಾಗುವದು ಸಾಧ್ಯವಿದೆ. ಅದು ಜನಪದ ಸಸ್ಯಜ್ಞಾನ ಪ್ರಪಂಚಕ್ಕೆ ಕನ್ನಡ ಸಸ್ಯನಾಮ ಭಂಡಾರಕ್ಕೆ ಬಹುದೊಡ್ಡ ನಿಧಿಯಾಗಬಹುದು. ಕನ್ನಡದಲ್ಲಿ ಜನಪದಸಸ್ಯ ವಿಶ್ವಕೋಶ ರಚಿಸಬೇಕೆಂಬ ಮಹಾತ್ವಾಕಾಂಕ್ಷೆಯುಳ್ಳವರು ಇತ್ತ ಗಮನಿಸಬೇಕು.)

೧೯. ಹಾದಿ ಬೀದಿಯ ಕಳೆಗಳಿಗೂ ಹೆಸರಿದೆ. ಜೊತೆಗೆ ಮನುಷ್ಯ ಉತ್ತಿಬಿತ್ತುವ ಹೊಲ ಗದ್ದೆ ಗಳ ಲ್ಲಿಯ ಕಳೆಗಳಿಗೂ ಹೆಸರಿದೆ. ಹೊನ್ನಾವರದ ಗಾಮೊಕ್ಕಲು ಬಲ್ಲ ಗದ್ದೆ ಕಳೆಗಳ ಹೆಸರನ್ನು ಅವುಗಳ ಜಾನಪದವನ್ನು ಅರಿಯಲು ಕೃಷಿಕ ಮಹಿಳೆ ಅಳ್ಳಂಕಿಯ ಹನ್ಮಿ ತಕ್ಕ ಸಂಪನ್ಮೂಲ ವ್ಯಕ್ತಿ. ನಿಮ್ಮೂರಿನಲ್ಲಿಯೂ ಇಂತಹವರಿದ್ದಾರೆ; ಕರ್ನಾಟಕದಲ್ಲಿ ಇಂತಹ ನೂರಾರು ಜನರಿದ್ದಾರೆ ಹುಡುಕಬೇಕು. ಹನ್ಮಿ ತಮ್ಮ ಬತ್ತದ ಗದ್ದೆಯಲ್ಲಿ ಬೆಳೆಯುವ ಕರ್ಕಿಜಡ್ಡು, ಮುರ್ಗನ್‌ಜಡ್ಡು, ನೆರಿಯಾ, ದುರ್ವಿಜಡ್ಡು, ಹನ್ನಿಪಟ್ಟಿ, ಚುಂಗದಹುಲ್ಲು, ತಳಕಲುಗಳ ಬಗ್ಗೆ ಹೇಳುತ್ತ ಗದ್ದೆಯಲ್ಲಿ ಇವು ಕೊಡುವ ಕಾಟವನ್ನು ಬಿಡದೆ ವಿವರಿಸಬಲ್ಲರು. ಅಂಕೋಲೆಯ

ನಾಡವರು ಬಲ್ಲ ಕಳೆಗಳಾದ ನೊರ್ರ್ಯಾ, ಗರ್ಗಾ, ಚಿಟ್ಟುಂಬಿ, ಕೊಡಿಬಿಂಬಿ, ಹುಯ್ದಿಗ್ಯಾ ಹಣ್ಯಾ, ಹರ್ಲೆ, ದೊಂಡ್ಗಾ, ಕರ್ಕಿ, ಕೆಪ್ಪಿಕಾಲು, ಇಲ್ಲಿಯ ಹಾಲಕ್ಕಿ, ಒಕ್ಕಲುಬಲ್ಲ, ಬೆಳಶೊಪ್ಪು, ಹೆಣಗಿ, ಬೊಮ್ಮಣ್ಯ ಕುಲಾಂಡ್ಗಿ, ಒಂದೆ ಎರಡೆ, ಕರ್ನಾಟಕವನ್ನು ಸುತ್ತಿದರೆ ಅದೆಷ್ಟು ಹೆಸರುಗಳು ದೊರೆಯಬಹುದೋ. ಈ ಊಹೆಯೇ ರೋಮಾಂಚನ ತರುತ್ತದೆ. ನಾವು ಬಿತ್ತಿದ ಬೆಳೆಯ ಜೊತೆ ಹೇಗೋ ಜನ್ಮ ಪಡೆದು ಆ ಬೆಳೆ ಪಡೆದ ಅನ್ನದಲ್ಲಿ ಪಾಲು ಕಸಿಯುತ್ತ ಬದುಕಲು ಹೋರಾಡುತ್ತಿರುವ ಹೊಲ ಗದ್ದೆಗಳಲ್ಲಿಯ ಬೆಳೆಯ ಸಂಗಾತಿ ಕಳೆಗಳೆಲ್ಲ ನಿಶ್ಪ್ರಯೋಜಕವೆ? ಇರಲಾರದು. ಯಾವಯಾವ ಕಳೆಯಲ್ಲಿ ಯಾವಯಾವ ಪ್ರಯೋಜನ ಅಡಗಿದೆಯೋ ಹೇಳಬಲ್ಲವರೆಲ್ಲಿದ್ದಾರೆ? ಸಂಗ್ರಹಿಸಿ ಆಯುರ್ವೇದ ಮಾಡ ಬಲ್ಲ ಚರಕ ಸುಶ್ರುತರೆಲ್ಲಿದ್ದಾರೆ? ಸದ್ಯ ನನಗೆ ತಿಳಿದು ಬಂದ ಜ್ಞಾನವನ್ನು ಆಧರಿಸಿ ಹೇಳುವದಾದರೆ ಕರ್ಕಿ[ಕರ್ಕಿಜಡ್ಡು] ಕೊಡಿಬಿಂಬಿ ಕೆಪ್ಪಿನ ಕಾಲುಗಳು ಔಷಧ ಸಸ್ಯಗಳಾಗಿವೆ. ಹುರುಡೆಯು ಆಲಸಿ ರೈತನ ಗದ್ದೆಯಲ್ಲಿ ನೆಲೆ ಊರಿದರೆ ಎಕರೆಗೆ ಚೀಲಗಟ್ಟಲೆ ಬಟಾಟೆಯನ್ನು ಹೋಲುವ ಸೇಂಗಾ ಕಾಳಿನ ಗಾತ್ರದ ಗೆಣಸಿನ ರುಚಿಯ ಗಡ್ಡೆಗಳನ್ನು ನೀಡಬಲ್ಲದು. ಈ ಹಿಂದೆ ರೈತ ಕಳೆ ಕೀಳುವಾಗ ಕಣ್ಣು ತಪ್ಪಿಸಿಕೊಂಡು ಬೆಳೆದ ಕೆಲವು ಈ ಹುರುಡೆ ಗಿಡಗಳ ಗಡ್ಡೆಯನ್ನು ಅಗೆದು ತಿನ್ನುವ ಮಕ್ಕಳಿದ್ದರು. ತಾವು ತಮ್ಮ ಚಿಕ್ಕಂದಿನಲ್ಲಿ ಹುರುಡೆ ಅಗಿಯಲು ಹೋಗುತ್ತಿದ್ದ ಗದ್ದೆ ಚಾರಣವನ್ನು ಹೆಮ್ಮೆಯಿಂದ ಹೇಳಿಕೊಳ್ಳುವ ಹಿರಿಯರು ಈಗಲೂ ನಿಮಗೆ ಕಾಣಸಿಗಬಹುದು. ಅನ್ನ ಸಿಗದಿದ್ದಾಗ ಮನೆಮಂದಿಯೆಲ್ಲ ಹುರುಡೆ ಗದ್ದೆಗಿಳಿದು ಗಡ್ಡೆ ಕಿತ್ತು ಬೇಯಿಸಿ ತಿನ್ನುವ ಬಡ ಕುಟುಂಬಗಳಿದ್ದವು. ಸದ್ಯ ಈ ಪರಿಸ್ಥಿತಿ ಇಲ್ಲಿಲ್ಲ.

ಇನ್ನು ಹಳೆ ಬತ್ತದ ತಳಿಯ ಬೆಳೆಬೀಜಗಳ ಹೆಸರುಗಳು, ಅವುಗಳ ಇತಿಹಾಸ, ಜನ ನೆನಪು ಮಾಡಿಕೊಳ್ಳುವ ಪರಿ, ಅವರು ಒರೆಯುವ ಅವುಗಳ ಉಪಯೋಗ, ಅವು ನಮ್ಮ ದನ ಕರುಗಳಂತೆ ಹಿರಿಯರ ಕುಟುಂಬದ ಸದಸ್ಯರಂತೆ ತಮ್ಮೊಡನೆ ಬಾಳಿದ ವಾಸ್ತವ ಪಾರಾಯಣ ರಾಮಾಯಣ ಮಹಾಭಾರತಗಳ ಶ್ರವಣದಂತೆ ಗೌರವ

ತರುತ್ತದೆ. ಹಿರಿಯರು ತಾವು ಬಿತ್ತಿ ಬೆಳೆದ ತಮ್ಮ ಕೈ ತಪ್ಪಿಹೋದ ಬೆಳೆಯನ್ನು ನೆನಪಿಸಿಕೊಂಡು ಪುಳಕಿತರಾಗುವದನ್ನು ಕಾಣುವುದರ ಜೊತೆ ಅದರ ಕುರಿತ ಅವರ ಅನುಭವನ್ನು ಕೇಳುವದೇ ಒಂದು ಅಪೂರ್ವ ಅನುಭವ. ಈ ಭಾಗ್ಯ ಎಲ್ಲರಿಗೂ ದೊರೆಯದು. ನೀವೊಮ್ಮೆ ಹಿರಿಯ ರೈತರ ಬಳಿ ಹೋಗಿ ಅವರು ಬಲ್ಲ ಹಳೆ ತಳಿಗಳ ಬಗೆಗಿನ ನೆನಪುಗಳನ್ನು ಕೆದಕಿರಿ. ಹೊಸ ಅನುಭವ ಪಡೆಯಿರಿ.

ಹೊನ್ನಾವರದ ಅಳ್ಳಂಕಿಯ ರೈತರು ಬಲ್ಲ ಕುಂಬ್ರಿಮುಂಡ್ಗ, ಕಬ್ಗ, ನೆರಿಬಳ್ಗ, ಚಿಂಚಾಮಣಿ, ಬಂಕಾ, ಫಲಗುಣ, ಗೌರಿ, ಸಣ್ಣಜಟ್ಟು, ಆಯ್ಪಿ, ಜ್ಯೋತಿ, ಸ್ವಾರದೆಂಟು, ಬಂತ್ವಾಳ, ಮಂಡಿದ ಬತ್ತ, ಬೆಳಿಯಕ್ಕ, ಜಡೆಪಾಂಡ್ಯ, ಅಂಕೋಲಾದ ಹಾಲಕ್ಕಿ ಒಕ್ಕಲು ಬಲ್ಲ ಕಬ್ಬಿನತಳಿಯ ಹೆಸರುಗಳಾದ ರಾಮ್‌ರಸ್ಬಾಳೆ, ದಾಸ್‌ಗಬ್ಬು, ಮೊರಾಸು, ಎಚ್‌ಎಮು– ಕೊಯ್‌ಮತ್ತೂರು– ಭತ್ತದ ತಳಿಗಳ ಹೆಸರುಗಳಾದ: ಸಿಣಬತ್ತ, ಜೇರಗ್‌ಸಾಲಿ, ಗಂಧಸಾಲಿ, ಬೆಳಿಯಕ್ಕ, ಪಾಂಡ್ಯ, ಕೆಂಪ್ಯಾ, ಅಜ್ಗ, ಸೆಣ್ಮಲ್ಗ, ಮಸ್ಕತ್, ಹಲ್‌ಸಿಮ್ಯಾ, ಕಗ್ಗಾ, ಹಳ್ಗಾ, ಇತ್ಯಾದಿ ನೂರೆಂಟು ಹೆಸರುಗಳು. ಇವುಗಳಲ್ಲಿ ಎಲ್ಲವೂ ಹಳೆಯವಲ್ಲ, ಹೊಸವನ್ನು ಸ್ಪಷ್ಟವಾಗಿ ಗುರುತಿಸಬಹುದು ಹೀಗೆ ಕರ್ನಾಟಕದ ಹೊಲ ಗದ್ದೆ ಬೆಟ್ಟ ತೋಟಗಳಲ್ಲಿ ತಿರುಗಾಡಿದರೆ ಅದೆಷ್ಟು ಸಸ್ಯ ನಾಮಗಳು ದೊರೆಯಬಹುದೋ?

೨೦. ನಮ್ಮ ಬತ್ತದ ಬೆಳೆಯ ಹೆಸರುಗಳಾದ ಮಲ್ಗೆ, ಸಣಮಲ್ಗೆ ಇತ್ಯಾದಿ ಹೆಸರುಗಳು ನಮ್ಮ ರೈತರ ಕಾವ್ಯ ಶಕ್ತಿಗೆ ಸಾಕ್ಷಿಯಾಗಿವೆ. ಅನ್ನದ ಹೆಸರೇ ಮಲ್ಲಿಗೆ, ಅನ್ನ ಹೇಗಿರಬಹುದು? ಅಂಗಳದಲ್ಲಿ ನಿಂತು ಹಾಡುತ್ತ ಒನಕೆಯಿಂದ ಕುಟ್ಟಿ ಮಿರಿದು ತಯಾರಿಸಿದ ಆ ಅನ್ನದ ರುಚಿ ಕೆ.ಜಿ. ಅಕ್ಕಿಗೆ ನೂರು ರೂಪಾಯಿ ಕೊಟ್ಟರೂ ಈಗ ದೊರೆಯಲಾರದು. ಆಗಿನ ಅನ್ನದಲ್ಲಿ ಈಗಿನ ರಾಸಾಯನಿಕ ವಿಷವಂತೂ ಇರಲಿಲ್ಲ. ಏನು ಪುಣ್ಯವಂತರೋ ಅವರು. ಜೇರಗ್‌ಸಾಲಿ, ಗಂಧಸಾಲಿಯನ್ನು ಗರತಿಯರು ಬತ್ತ ಮಿರಿಯುವ ಹಾಡಿನಲ್ಲಿ ಕಟ್ಟಿಟ್ಟಿದ್ದಾರೆ. ಚಿಂಚಾಮಣಿ ಬತ್ತಕ್ಕೆ ಮೊದಲು ಹೆಸರಿಟ್ಟವರಾರು? ಚಿಂಚಾಮಣಿ ಬತ್ತವನ್ನು ನಾನು

ನೋಡಿದ್ದೇನೆ. ಮೀಸೆ ಬತ್ತವೆಂದು ನಾನು ನೆನಪಿಟ್ಟುಕೊಂಡ ಕಗ್ಗನ ಬತ್ತದ ಅನ್ನವುಂಡಿದ್ದೇನೆ. ಈ ಬತ್ತದ ಮೀಸೆ ಮುರಿದು ಒಣಗಿಸುವ ಕೆಲಸದಲ್ಲಿ ನನ್ನ ತಾಯಿಗೆ ನೆರವಾಗಿದ್ದೇನೆ. ಇದು ಬಡವರು ಉಣ್ಣುವ ಬೆಳೆಯೆಂದುದನ್ನು ಕೇಳಿದ್ದೇನೆ. ನಮ್ಮೂರಿನಲ್ಲಿ ಬಿಳಿಯಕ್ಕಿ ಅನ್ನವುಣ್ಣುವ ಭಾಗ್ಯ ಸಿರಿವಂತರದ್ದು ಎಂಬ ಪ್ರತೀತಿಯಿತ್ತು. ಅದು ಆಗ ನಮ್ಮೂರಿನ ಬಾಸ್ಮತಿಯಾಗಿತ್ತು. ಪಾಂಡ್ಯ ಎಂಬ ಕೆಂಪಕ್ಕಿಗೆ ಬಿಳಿಯಕ್ಕಿಗಿಂತ ಬೆಲೆ ಕಡಿಮೆ ಅದು ಮಧ್ಯಮ ವರ್ಗದವರ ಅನ್ನದ ಅಕ್ಕಿ ಎಂಬ ಮಾತು ಕೇಳುತ್ತಿತ್ತು.

೨೧. ಹಳೆತಳಿ ಮೋಹ ಹಿಡಿದು ಹೊರಟ ಕೆಲವು ಆಸಕ್ತರು ಹಳೆ ಬೀಜ ತಳಿಗಳ ಬಗ್ಗೆ ಅದ್ಭುತ ಮಾಹಿತಿ ಕಲೆ ಹಾಕಿದ್ದಾರೆ. ಕೆಲವು ಪತ್ರಿಕೆಗಳು ಇಂತಹ ಹಳೆ ಬತ್ತದ ತಳಿಗಳ ನವಣೆಯಂತಹ ಕಿರುಧಾನ್ಯಗಳ ರಾಗಿಜೋಳಗಳ ಸಂಕ್ಷಿಪ್ತ ಮಾಹಿತಿಯನ್ನು ಪ್ರಕಟಿಸುತ್ತಿವೆ. ಇದನ್ನು, ಓದುವಾಗ ಮನಸ್ಸು ತುಂಬುತ್ತದೆ. ಆದರೆ ಹೆಸರಿನ ಜೊತೆಗೆ ನಿರ್ನಾಮವಾಗುತ್ತಿರುವ ವಿನಾಶದ ಅಂಚಿನಲ್ಲಿರುವ ತಳಿಗಳ ಬಗ್ಗೆ ಓದುವಾಗ ಮನಸ್ಸು ಅಯ್ಯೋ ಎಂದು ಕಿರಿಚಿ ಒಳಗೊಳಗೆ ಅಳುತ್ತದೆ.

ಸರಕಾರಿ ಯೋಜನೆಗಳು ಒಳಹೊಕ್ಕರೆ ಸಾಕು ಹಳೆಯ ಶಬ್ದಗಳು ನೆಲಸಮವಾಗುತ್ತವೆ. ಹೆಸರುಗಳ ಜೊತೆ ಆಯಾ ತಳಿಗಳೂ ಸಾಯುವದು ಸಹಜವಾಗಿ ದುರ್ಧರವೆನಿಸುತ್ತದೆ. ಆಧುನಿಕ ಕಾಲದಲ್ಲಿ ಅಮ್ಮ ಹೋಗಿ ಮಮ್ಮಿ ಬಂದರೆ ಅಮ್ಮ ಬದುಕಿರುತ್ತಾಳೆ. ಒಂದಾನೊಂದು ದಿನ ಮಮ್ಮಿ ಹೋಗಿ ಅಮ್ಮ ಬರಬಹುದು. ಆದರೆ ಹಳೆಯ ತಳಿಗಳು ತಮ್ಮ ಹೆಸರುಗಳ ಜೊತೆ ಲುಪ್ತವಾದರೆ ಮತ್ತೆ ಮರಳುವುದುಂಟೆ? ಹಳೆಯ ತಳಿಗಳನ್ನು ಮಣ್ಣಿಗೆ ಸೇರಿಸಿ ಹೊಸ ತಳಿಗಳಾದ ಆಯ್ಟಿ, ಜ್ಯೋತಿ ಸಾವರದೆಂಟು, ಇಂತಹ ನೂರಾರು ಹೆಸರುಗಳು ಕನ್ನಡವಾಗಿ ಹೊಸ ತದ್ಭವ ಪ್ರಕರಣ ಸೇರಲು ಸಿದ್ಧಗೊಳ್ಳುತ್ತಿವೆ, (ಉತ್ತಮವಾದುದನ್ನು ಇಟ್ಟುಕೊಳ್ಳೋಣ.)

೨೨ ಬುಡಕಟ್ಟು ಜನರು ತಮ್ಮ ಬಳಿಗೆ ಅಂದರೆ ಕುಲಕ್ಕೆ ಮರಗಿಡ ಹಾಗೂ ಪ್ರಾಣಿಗಳ ಹೆಸರನ್ನು ಇಟ್ಟುಕೊಂಡಿರುತ್ತಾರೆ. ಆಯಾ ಹೆಸರಿನ ಮರಗಿಡಗಳನ್ನು ಅವರು ತಮ್ಮ ಕುಲದೇವರೆಂದು ತಿಳಿಯುತ್ತಾರೆ. ಈ ಮರ ಗಿಡ ಪ್ರಾಣಿಗಳನ್ನು ಇವರು ಕಡಿಯುವುದಿಲ್ಲ, ಕೊಲ್ಲುವುದಿಲ್ಲ. ಕನ್ನಡ ನಾಡಿನ ಮೊದಲನೆಯ ಸಾಮ್ರಾಟನಾದ ಮಯೂರವರ್ಮನ ಕುಲಕ್ಕೆ ಕದಂಬ ಎಂಬ ಹೆಸರಿದೆ. ಮಯೂರವರ್ಮನ ಮನೆಯ ಮುಂದೆ ಕದಂಬ ಮರವಿತ್ತು ಎಂದು ಹಿಂದಿನ ಜನ ಊಹಿಸಿ ಪುಸ್ತಕದಲ್ಲಿ ಬರೆದಿದ್ದಾರೆ.

೨೩. ಅನೇಕ ಸಸ್ಯನಾಮಗಳು ನಮ್ಮ ಜನಕ್ಕೆ ತುಂಬ ಪ್ರಿಯ. ಅವುಗಳನ್ನು ಹೇಗಾದರೂ ಉಳಿಸಿ ಕೊಳ್ಳುವ ಅವರ ಜಾಣ್ಮೆಯನ್ನು ಗಮನಿಸಬೇಕು, ಅರಿಯಬೇಕು ಸಸ್ಯ ಸಂಬಂಧಿತ ಸ್ಥಳನಾಮಗಳು ಹೇಗೆ ಹುಟ್ಟಿದವು? ಆಯಾ ಸ್ಥಳನಾಮಗಳು ಆಯಾ ಸ್ಥಳದಲ್ಲಿಯ ಆಯಾಸ್ಥಳದ ಹೆಸರಿನ ಸಸ್ಯಬಾಹುಳ್ಯದಿಂದ ಹುಟ್ಟಿಕೊಂಡವೆ? ಅಥವಾ ಈ ಹೆಸರುಗಳನ್ನು ಬುದ್ಧಿವಂತ ಜನ ಅರಿತು ಇಟ್ಟರೆ? ಖಚಿತವಾಗಿ ಹೇಳಲಾಗದು. ಅದೇನೆ ಇರಲಿ. ಈ ಸ್ಥಳನಾಮಗಳನ್ನು ಗಮನಿಸುತ್ತ ಅರಿಯುತ್ತ ಸಾಗಿದಂತೆ ಇವೆಲ್ಲವೂ ಔಷಧ ಸಸ್ಯಗಳಾಗಿರುವದು ತಿಳಿದು ಬರುತ್ತದೆ. ಈ ಅಂಶವು ಈ ಹೆಸರಿಟ್ಟವರ ಇದನ್ನು ಒಪ್ಪಿಕೊಂಡವರ ಅದ್ಭುತ ಔಷಧ ಜ್ಞಾನದ ಮೇಲೆ ಬೆಳಕು ಚಲ್ಲುತ್ತದೆ.

ಜಂಬೂದ್ವೀಪವೆಂಬ ನಮ್ಮ ಪ್ರಾಚೀನ ರಾಷ್ಟ್ರನಾಮದಿಂದ ತೊಡಗಿ ನಮ್ಮ ರಾಜ್ಯದಲ್ಲಿ ಹರಡಿರುವ ಸಸ್ಯನಾಮದ ಸ್ಥಳನಾಮಗಳನ್ನು ಗಮನಿಸುತ್ತ ಬೆಂಗಳೂರಿನಿಂದ ಹಾದು ನನ್ನೂರು ಹೊನ್ನಾವರಕ್ಕೆ ಬರುವ ತನಕ ನೂರಾರು ಸಸ್ಯ ನಾಮಗಳು ಸ್ಥಳನಾಮಗಳಾಗಿ ಮೆರೆದ ಅಪೂರ್ವ ಅನುಭವ ನಮಗಾಗುತ್ತದೆ. ಕಳಚೆ, ಕರ್ಕಿ ಮಣಕಿ, ಗೇರುಸೊಪ್ಪೆ, ನೆಮತಿ ಕಗ್ಗಲಿ, ಶಿರಸಿ, ಗೋಕರ್ಣ ಹೊನ್ನಾವರ, ನೇತ್ರಾಣಿ, ಗೋಳಿ, ಕಿನ್ನಿಗೋಳಿ, ಹೈಗುಂದ, ಹೈಗನಾಡು ಮುಂತಾದ ನೂರಾರು ಊರಿನ ಮತ್ತು ನಾಡಿನ ಹೆಸರುಗಳು ಗಿಡ ಮರಗಳ

ಹೆಸರುಗಳಾಗಿವೆಯೆಂಬ ಅರಿವಾಗಿ ಮನತುಂಬಿ ಮೈ ದುಂಬುತ್ತದೆ. ಇವರು ಆರಿಸಿಕೊಂಡ ಮರಗಿಡಗಳ ಹೆಸರು ಮದ್ದಿನ ಗಿಡಮರಗಳ ಹೆಸರಾಗಿರುವುದು ಇಲ್ಲಿನ ವಿಶೇಷವಾಗಿದೆ.

[೨೪. ಜಾನಪದರು ಮರ ಗಿಡಬಳ್ಳಿ ಪ್ರಾಣಿಗಳ ಹೆಸರನ್ನು ತಮ್ಮ ಜನ ದೇವರು ಮತ್ತು ಕುಲಕ್ಕಷ್ಟೇ ಅಲ್ಲ, ತಮ್ಮ ಊರಿಗೂ ಗಿಡಮರ ಬಳ್ಳಿಗಳ ಹೆಸರನ್ನಿಟ್ಟು ಅವುಗಳನ್ನು ಅವರು ಗೌರವಿಸುತ್ತಿದ್ದರು. ಆ ಬಗ್ಗೆ ಹೆಮ್ಮೆಪಡುತ್ತಿದ್ದರು.]

ನಾಡೋಜ ಡಾ.ಎಚ್.ಎಲ್.ನಾಗೇಗೌಡರ ನನ್ನೂರು ಪುಸ್ತಕದಲ್ಲಿ ಕಗ್ಗಲಿ ಎಂಬ ಊರಿನ ಹೆಸರಿದೆ. ನನ್ನೂರಿನ 'ಕಗ್ಗಲಿ'ಯು ಮಂಡ್ಯ ಜಿಲ್ಲೆಯಲ್ಲಿದೆ. ಇಲ್ಲಿಯ ಊರಿಗೆ ಈ ಹೆಸರು ಬರಲು ಅಲ್ಲಿಯ ಕಗ್ಗಲಿ ಮರಗಳೇ ಕಾರಣವೆಂದು ಲೇಖಕರು ಬರೆಯುತ್ತಾರೆ. ಹೀಗೆ ಮರಗಳ ಅಸ್ತಿತ್ವದಿಂದಾಗಿ ಊರಿಗೆ ಹೆಸರು ಬರುವದನ್ನು ಹಲವಾರು ಪ್ರದೇಶಗಳಲ್ಲಿ ಗಮನಿಸಬಹುದಾಗಿದೆ. ಬೆಂಗಳೂರಿನ ಬನಶಂಕರಿ ಯಿಂದ ಕನಕಪುರದ ದಾರಿಯಲ್ಲಿ ಕಗ್ಗಲಿಪುರ ಎಂಬ ಊರಿದೆ. ಇಲ್ಲಿ ಕಗ್ಗಲಿ ಮರಗಳಿವೆ. ಉಪ್ಲೆ ಇದು ಉತ್ತರ ಕನ್ನಡದ ಹೊನ್ನಾವರ ತಾಲೂಕಿನಲ್ಲಿದೆ. ಉಪ್ಪಳಿಗೆಯ ಹೂವಿನೊಂದಿಗೆ ಈ ಹೆಸರು ಸಂಬಂಧ ಬಂದಿದೆ.

(ನ್ಯಾಮತಿ ಇದು ಬಣ್ಣ ನೀಡುವ ಗಿಡದ ಹೆಸರು. ಇದು ಸಾಗರದ ಬಳಿಯ ಊರಿನ ಹೆಸರು. ಅತ್ತಿ ಕುಟುಂಬಕ್ಕೆ ಸೇರಿದ ಕಿನ್ನಿಗೋಳಿ ಎಂಬ ಹೆಸರಿನ ಊರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ.)

ಹೈಗುಂದ ಕೂಡ ಹೈಗ ಮರಗಳ ಇರುವಿಕೆಯನ್ನು ಸೂಚಿಸುವ ವೃಕ್ಷ ಸಂಬಂಧಿ ಸ್ಥಳನಾಮವಾಗಿದ್ದು ಶರಾವತಿ ತೀರದ ಈ ಗುಂದದಲ್ಲಿರುವ ಹೈಗಮರಗಳ ಕಾರಣದಿಂದ ಹೈಗುಂದ ಎಂಬ ಹೆಸರು ಬಂತು. ಈ ಹೈಗುಂದದಲ್ಲಿ ನೆಲೆಸಿದ ಜನರೇ ಹೈಗರು. ಮರ ಮೊದಲು, ಬಳಿಕ ಸ್ಥಳನಾಮ ಬಳಿಕ ಜನನಾಮ. ಇದು ಹೈಗುಂದದಲ್ಲಿ ನಡೆದ ಪ್ರಕ್ರಿಯೆ.

ಉತ್ತರ ಕನ್ನಡ ಜಿಲ್ಲೆಯ ಉತ್ತರದಂಚಿನ ತಾಲೂಕು ಯಲ್ಲಾಪುರ. ಇಲ್ಲಿಂದ ಸುಮಾರು ೨೮ ಕಿ.ಮೀ ದೂರದ ಡಾಂಬರು ರಸ್ತೆಯಲ್ಲಿ ಸಾಗಿದರೆ ಸಿಗುವ ಆಳವಾದ ಕಾಳಿ ಕಣಿವೆಯಲ್ಲಿರುವ ಚಿಕ್ಕ ಊರು ಕಳಚೆ.

ಕಳಚೆ ಇದು ಅಂಟುಭರಿತ ಹಣ್ಣಿನ ಗಿಡ. ಹಣ್ಣನ್ನು ತಿನ್ನುತ್ತಾರೆ. ಇದು ಬೇರ್ಮದ್ದು. ಉತ್ತರ ಕನ್ನಡ ಜಿಲ್ಲೆಯ ತಾರೆ, ಬಾರೆ ಕಳಚೆ ಎಂಬ ಸಸ್ಯನಾಮತ್ರಯಗಳಲ್ಲಿ ಇದು ಒಂದು. ತಾರೆ ಬಾರೆ ಕಳಚೆ ಇವು ಉತ್ತರ ಕನ್ನಡದ ಮರನಾಮದಿಂದ ಹುಟ್ಟಿದ ಊರ ಹೆಸರುಗಳು; ನೀವೆಲ್ಲಾದರೂ ಎಲ್ಲಾಪುರ ಸಿರ್ಸಿ ಕಡೆ ಹೋದರೆ ಈ ಮೂರು ಹೆಸರನ್ನು ಹೆಂಗಸರ ಗುಂಪಿದ್ದಲ್ಲಿ ಒಮ್ಮೆಲೆ ಉಚ್ಚರಿಸದಿರಿ. ಅನರ್ಥವಾದೀತು. ಜೋಕೆ.

ಹೊನ್ನೂರು, ಹೊನ್ನಾವರ, ಓನೂರ್ ಇವು ಹೊನ್ನಾವರಕ್ಕೆ ಇರುವ ಇತರ ಹೆಸರುಗಳು. ಈ ಹೆಸರು ಹೊನ್ನಾವರದ ಕರಾವಳಿಯಲ್ಲಿ ಬಹುಸಂಖ್ಯೆಯಲ್ಲಿ ಇರುವ ಕೆಲೊಫಿಲ್ಲಮ್ ಇನೊಫಿಲಮ್ ಎಂಬ ಹೊನ್ನೆ ಕಾಯಿ ಮರಕ್ಕೆ ಸಂಬಂಧಪಟ್ಟದ್ದಾಗಿದೆ ಎಂದುಕೊಂಡಿದ್ದೇನೆ. ಹಿಂದೆ ಇದರ ಕಾಯಿಯಿಂದ ಎಣ್ಣೆತೆಗೆದು ದೀಪ ಉರಿಸುತ್ತಿದ್ದರು. ಶರಾವತಿಯ ವಿದ್ಯುತ್ ಯೋಜನೆ ಬರುವ ಪೂರ್ವದಲ್ಲಿ ಹೊನ್ನೆಕಾಯಿ ಮರದ ಹೊನ್ನೆಣ್ಣೆಯೇ ಶರಾವತಿ ತೀರದ ಜನರ ವಿದ್ಯುದ್ದೀಪವಾಗಿತ್ತು. ಈ ಊರ ಹೆಸರಿಗೆ ಬೇಂಗ ಮರವೂ ಕಾರಣವಾಗಿರಬಹುದು.

[೨೫. ಅನೇಕ ಮರ ನಾಮಗಳು ದೇವನಾಮಕ್ಕೆ ಮೂಲವಾಗಿರುವದುಂಟು. ಕಗ್ಗಲಿಯ ಗ್ರಾಮ ದೇವತೆ ಕಗ್ಗಲಿಯಮ್ಮ. ಮರದಿಂದ ಊರಿಗೆ, ಊರಿನಿಂದ ಗ್ರಾಮದೇವರಿಗೆ ಹೆಸರು ಬಂತು.]

ಕೆಲವು ಮರಗಳಲ್ಲಿ ದೇವರು ನೆಲೆಸುತ್ತಾನೆಂದು ಜನರು ನಂಬುತ್ತಾರೆ. ಅತ್ತಿಮರದಲ್ಲಿ ದತ್ತಾತ್ರೇಯ ಬೇವಿನ ಮರದಲ್ಲಿ ಎಲ್ಲಮ್ಮ ಎಲೆಯಮ್ಮ ಬೇವಿನ ಮರದಮ್ಮ, ಅರಳಿ ಮರದಲ್ಲಿ ಅಶ್ವತ್ಥ ನಾರಾಯಣ, ತುಳಸಿಯಲ್ಲಿ ವೆಂಕಟರಮಣ ಇತ್ಯಾದಿ. ಇವರು ಈ

ಗಿಡಮರಗಳನ್ನು ಕಡಿಯುವದಿಲ್ಲ. ಪೂಜಿಸುತ್ತಾರೆ. ಯಾಕೆಂದರೆ ಇವು ಉತ್ತಮವಾದ ಔಷಧಗುಣವನ್ನು ಹೊಂದಿದ ಮರಗಳಾಗಿವೆ. ಇವು ನೀಡುವ ಹಣ್ಣು ಬೀಜ ಎಲೆ ತೊಗಟೆ ಬೇರುಗಳೆಲ್ಲವೂ ಸೇವನೆಗೆ ಅರ್ಹವಾಗಿವೆ; ಸೇವಿಸಿದರೆ ಪುಷ್ಟಿದಾಯಕವಾಗಿವೆ. ಅನೇಕ ರೋಗ ನಿವಾರಕ ಔಷಧ ಮರಗಿಡಗಳು ಸಾಕ್ಷಾತ್ ದೇವರೆಂದು ಭಾವಿಸಿ ನಡೆದು ಕೊಂಡಿರುವದು ಆ ಮರಗಳ ರೋಗನಿವಾರಕ ಗುಣದ ಮೇಲೆ ಜನರಿಟ್ಟ ನಂಬಿಕೆಯ ದ್ಯೋತಕವಾಗಿದೆ. [ಕೆಲವರಿಗೆ ಮರವೇ ದೇವರು.] ತಮಿಳುನಾಡಿನಲ್ಲಿ ವೇಂಗೈ ಮರ ಮುರುಗನ ಬಿಂಬವೆಂದೂ ಮುರುಗನೇ ವೇಂಗೈ ಮರವಾದನೆಂದು ಅವರು ತಿಳಿಯುತ್ತಾರೆ. ತುಳುನಾಡಿನಲ್ಲಿ ಹಾಲೆ ಮರವು ದೀಪಾವಳಿಯ ಬಲೀಂದ್ರ. ಆದ್ದರಿಂದ ಪೂಜೆಗಳಲ್ಲಿ ಆಚರಣೆಗಳಲ್ಲಿ ಇವಕ್ಕೆ ಸ್ಥಾನ ನೀಡಿದ್ದಾರೆ.

೨೬. ಕನ್ನಡನಾಡಿನ ಜನಪದ ಮತ್ತು ಪುರಾಣ ಸಂಸ್ಕೃತಿಯ ಪೂಜಾ ಆಚರಣೆಗಳಲ್ಲಿ ನೂರಾರು ಬಗೆಯ ಹಣ್ಣುಕಾಯಿ ಎಲೆ ಹೂಗಳು ಪಾಲ್ಗೊಳ್ಳುತ್ತವೆ. ಅವುಗಳಲ್ಲಿ ಅನೇಕವು ಕಾಡಿನಿಂದ ನಾಡಿಗೆ ಬರುತ್ತವೆ. ಪುರಾಣೋಕ್ತ ವಿಧಾನದಲ್ಲಿ ಪೂಜೆಮಾಡುವ ಪೂಜಾರಿ ಹೇಳುವ ಅರ್ಕ-ಎಕ್ಕ, ನಿರ್ಗುಂಡಿ-ಲಕ್ಕಿ ದತ್ತೂರ-ಕೆಪ್ಪಟ್‌ಸೊಪ್ಪು, ಪಲಾಶ-ಮುತ್ತುಗ ಇತ್ಯಾದಿ ನೂರೆಂಟು ಪತ್ರ ಫಲಪುಷ್ಪಗಳ ಹೆಸರುಗಳು ಕೇವಲ ಮಂತ್ರಗಳಲ್ಲ. ಇವು ಔಷಧ ಸಸ್ಯಗಳ ಹೆಸರುಗಳಾಗಿವೆಯೆಂಬುದನ್ನು ಗಮನಿಸಬೇಕು. ಜನಪದ ಪೂಜೆ ಆಚರಣೆಯಲ್ಲಿ ಪಾಲ್ಗೊಳ್ಳುವ ಸಸ್ಯಪ್ರಪಂಚ ಕಡಿಮೆಯದಲ್ಲ. ಇದು ಅಲಿಖಿತ ಆಯುರ್ವೇದ. ಪುರಾಣೋಕ್ತ ಪೂಜಾ ವಿಧಾನದಲ್ಲಿ ಹೇಳಿದ ಸಸ್ಯಗಳನ್ನಲ್ಲದೆ, ಬಿಳಿಪತ್ರೆ ಮಂಗನಗೆಜ್ಜೆ, ಬಚ್ಚಲಬಳ್ಳಿ ನೆಡತಿಗೆ ಕೋಲು, ಹಿಟ್ಟನ ಕಂಚಿ, ಹಾಲೆಚಕ್ಕೆ, ಗಂಗಮ್ಮನ ಕಾಳು ತಗಟೆ ಬೀಜ, ಹೊನ್ನೆ ಹೂವು, ಹಿಂಡ್ಲೆ ಕಾಯಿ ಲಿಂಗ ದೊಂಡೆಕಾಯಿ, ಒಂದೆ ಎರಡೆ ಪ್ರತಿ ಹೆಸರಿನ ಗಿಡದಲ್ಲಿ ಜನಪದ ಆಯುರ್ವೇದ ತುಂಬಿದೆ.

೨೭. ವೇಂಗ ಬೇಂಗ ಹೊನ್ನೆ ಎಂಬ ತ್ರಿಭಾಷಾ ಹೆಸರುಗಳುಳ್ಳ

ಟೆರೋಕಾರ್ಪಸ್ ಮಾರ್ಸುಪಿಯಂ ಮರವು ಸ್ಥಳನಾಮವಾಗಿ, ದೇವರ ಹೆಸರಾಗಿ. ಗೌರವಯುತವಾದ ಮಾನವ ಹೆಸರುಗಳಿಗೆ ಮೂಲವಾಗಿ ಪ್ರಾಚೀನ ಕಂದಮಿಳು ಸಂಸ್ಕೃತಿಯ ರಾಯಭಾರಿಯಾಗಿ ಹೊನ್ನೆ ಎಂಬ ಹೆಸರಿನೊಂದಿಗೆ ನಮ್ಮೊಡನಿದೆ. ಕನ್ನಡ ನಾಡಿನಲ್ಲಿ ಹೊನ್ನೆ ಎಂಬ ಶಬ್ದದೊಂದಿಗೆ ಪ್ರಾರಂಭವಾಗುವ ನೂರಾರು ಹೆಸರುಗಳಿಗೆ ಇದು ಪ್ರಮುಖ ಕಾರಣವಾಗಿದೆ. ಹೊನ್ನೆ ಎಂಬುದು ಹೊನ್ನಪ್ಪ ಎಂಬ ಕನ್ನಡ ಜನಪದ ದೇವರ ಹೆಸರಾಗಿ. ಹೊನ್ನಿ ಹೊನ್ನಮ್ಮ ಹೊನ್ನ ಹೊನ್ನಪ್ಪ ಇತ್ಯಾದಿ ಕನ್ನಡ ನಾಡಿನ ಗಂಡು ಹೆಣ್ಣುಗಳ ಅಂಕಿತ ನಾಮವಾಗಿ ಹೊನ್ನೇಸರ, ಹೊನ್ನಾವರ ಇತ್ಯಾದಿ ನೂರಾರು ಸ್ಥಳಗಳ ಹೆಸರಾಗಿ ಬಳಕೆಯಲ್ಲಿದೆ. ತಮಿಳಿನ ವೇಂಗೈ ಮರದ ಹೆಸರು ಕನ್ನಡ ಕರಾವಳಿಯ ತುಳು ಭಾಷಾ ಪ್ರದೇಶದಲ್ಲಿ ಬೇಂಗ ಎಂದೂ ಕಂದ್ತಮಿಳು ಗಡಿಯಲ್ಲಿ ವೇಂಗ ಬೇಂಗ ಎಂದೂ ಇಲ್ಲಿಂದ ದೂರದ ಉತ್ತರ ಕನ್ನಡದಲ್ಲಿ ಹೊನ್ನೆ ಎಂದೂ ಪ್ರಚಲಿತ ವಾಗಿದೆ.

ವೇಂಗ, ಬೇಂಗ, ಇದು ತಮಿಳಿನ ಸಂಗಮ್ ಕಾಲಕ್ಕೆ ಅಲ್ಲಿನ ಮತ್ತು ದಕ್ಷಿಣ ಭಾರತದ, ಜನಪದ ಸಂಸ್ಕೃತಿಯಲ್ಲಿ ಹಾಸು ಹೊಕ್ಕಾಗಿತ್ತು. ಸಂಗಮ್ ಕವಿಗಳು ವೇಂಗೈ-ಬೇಂಗ ಮರದ ಬಗ್ಗೆ ಆ ಕಾಲದ ಜಾನಪದರಿಗಿರುವ ಹಲವಾರು ನಂಬಿಕೆಗಳನ್ನು ಸಾಹಿತ್ಯದಲ್ಲಿ ಬರೆದಿದ್ದಾರೆ, [ಹಳದಿಪಟ್ಟೆಯ ಹುಲಿಯೊಂದಿಗಿನ ಕವಿಸಮಯವನ್ನು ದಾಖಲಿಸಿದ್ದಾರೆ.] ತಮಿಳು ಜನಪದ ಸಂಸ್ಕೃತಿಯಲ್ಲಿ ವಿವಾಹಗಳು ವೇಂಗೈ ಮರದ ಕೆಳಗೆ ನಡೆಯುತ್ತವೆ. ಅಲ್ಲಿ ಹೊನ್ನೆ ಹೂ ಮದುವಣಗಿತ್ತಿಯ ಅಲಂಕಾರಕ ವಸ್ತುವಾಗಿದೆ. ಎಂದು ತಿಳಿದುಬರುತ್ತದೆ. ಉತ್ತರ ಕನ್ನಡದ ತುಳಸಿ ಮದುವೆಯಲ್ಲಿ ಬೆಟ್ಟಕ್ಕೆ ಹೋಗಿ ಹೊನ್ನೆ ಹೂ ತಂದು ತುಳಸಿಯಲ್ಲಿಯ ತಿರುಪತಿ ವೆಂಕಟರಮಣನ ಮಡದಿಗೆ ಇದನ್ನು ಮುಡಿಸುವ ಆಚರಣೆಯಿದೆ. ಇಲ್ಲಿಯ ಹಳ್ಳಿಗರು ತಮ್ಮ ಮಕ್ಕಳ ಮದುವೆಯಲ್ಲಿ ಹೊನ್ನೆ ಹೂ ತಂದು ಮದುವೆ ಚಪ್ಪರಕ್ಕೆ ಸಿಕ್ಕಿಸುತ್ತಾರೆ. ಹೊನ್ನೆ ಹೂ ಪ್ರತಿವರ್ಷ ಗಂಗಾಷ್ಟಮಿಯ ದಿನ ಶಿವಗಂಗೆಯರ ಮದುವೆಗಾಗಿ ಕುಳಿತು ಗಂಗಾವಳಿ ನದಿಗುಂಟ ತೇಲುತ್ತ ಗೋಕರ್ಣದ ಶಿವ

ಸಾನಿಧ್ಯಕ್ಕೆ ಬರುತ್ತದೆಯಂತೆ. ಅದು ನದಿಗುಂಟ ಸಾಗಿ ಗೋಕರ್ಣವನ್ನು ಮುಟ್ಟಿದಾಗ ಅದನ್ನು ಕಂಡ ಪೂಜಾರಿ ಅದನ್ನು ಕುಡಿ ಬಾಳೆಲೆಯಲ್ಲಿ ಎತ್ತಿ ತಂದು ಶಿವನಿಗರ್ಪಿಸುತ್ತಾನಂತೆ. ನುಗಲಿಯ ಗಂಗಾಷ್ಟಮಿಯ ಹಾಡು ಈ ವಿವರ ನೀಡುತ್ತದೆ [ಈಹಾಡನ್ನು ಕೇಳುತ್ತಿದ್ದಂತೆ ಕೇರಳದ ಮಕರ ಜ್ಯೋತಿಯ ನೆನಪಾಗುತ್ತದೆ]. ವಿಕ್ರಮಾರ್ಜುನದಲ್ಲಿಯ ಪಂಪನ ವೆಂಗಿಪಳು ವೆಂಗಿಮಂಡಲ- ಈ ಹೆಸರುಗಳು ವೇಂಗ-ಬೇಂಗ ಮೂಲದ ಶಬ್ದಗಳಾಗಿವೆಯೆಂದು ಹಸಿರು ಹೊನ್ನು ಖ್ಯಾತಿಯ ಬಿ.ಜಿ.ಎಲ್ ಸ್ವಾಮಿಯವರು ಅನುಮಾನಿಸುತ್ತಾರೆ. ಅನುಮಾನ ಬೇಡ. ಇವು ವೇಂಗ ಮರಕ್ಕೆ ಸಂಬಂಧಿಸಿದ ಹೆಸರುಗಳಾಗಿವೆ. ಅಷ್ಟೇ ಅಲ್ಲ ನಮ್ಮ ರಾಜ್ಯದ ರಾಜಧಾನಿ ಬೆಂಗಳೂರಿಗೆ ಈ ಹೆಸರು ಬರಲು ಬೇಂಗ ಮರವೇ ಕಾರಣವೆಂದು ನಾವು ಹೆಮ್ಮೆಯಿಂದ ಒಪ್ಪಿಕೊಳ್ಳಬಹುದು.

೨೮ ಕನ್ನಡ ನಾಡಿನ ಜನರ ಹೆಸರುಗಳಾದ ವೆಂಕಯ್ಯ, ವೆಂಕಣ್ಣ, ವೆಂಕು ವೆಂಕಮ್ಮ ಇವೆಲ್ಲ ವೇಂಗ ಮರಕ್ಕೆ ಸಂಬಂಧಿಸಿದವು. ತಿರುಪತಿಯು ವೇಂಗಡವಾಯಿತು. ತಿರುಪತಿ ತಿಮ್ಮಪ್ಪನಿಗೆ ವೆಂಕಟರಮಣನೆಂದು ವೇಂಗ ಮರದಿಂದಲೇ ಹೆಸರು ಬಂತು. ಇಲ್ಲಿ ರಮಣ ಸೇರಿಕೊಂಡು ಸಂಸ್ಕೃತವೆನಿಸಿಕೊಂಡಿತು

೨೯. ಜನಪದ ಸಂಸ್ಕೃತಿಯಲ್ಲಿ ಬೇಂಗಮರ ಯಾಕೆ ಇಷ್ಟೊಂದು ಮಹತ್ವ ಪಡೆದಿದೆ? ಯಾಕೆಂದರೆ ಇದರ ಔಷಧ ಮಹತ್ವವನ್ನು ಆಗಿನ ಜನ ಅರಿತಿದ್ದರು. ಆ ಜ್ಞಾನವೆಲ್ಲವೂ ನಮಗೆ ಸಾಗಿ ಬಂದಿಲ್ಲ. ರಕ್ತ ವರ್ಧಕ, ಹೊಟ್ಟೆ ಹುಣ್ಣು, ಮುಟ್ಟು ದೋಷ, ಮೂತ್ರ ರೋಗಾದಿಗಳನ್ನು ಗುಣ ಮಾಡುವ ಶಕ್ತಿ ಇದರ ತೊಗಟೆಯ ಕಷಾಯಕ್ಕಿದೆ. ಎಲೆ ಚರ್ಮ ರೋಗಗಳಿಗೆ ಮದ್ದು ಎನ್ನುತ್ತಾರೆ ಹಿರಿಯರು. ಒಳ ತೊಗಟೆಗೆ ತೂತು ತೆಗೆದಾಗ ಹೊರ ಬರುವ ರಕ್ತ ಬಣ್ಣದ ಕಿನೋ ಅಂಟು ಔಷಧ ತಯಾರಿಕಾ ಕಂಪನಿಗಳಿಗೆ ಅಚ್ಚುಮೆಚ್ಚು. ದ.ಕ.ದ ಬೆಳ್ತಂಗಡಿಯ ನಾಗರಿಕ ವೇದಿಕೆಯ ವಿದ್ಯಾ ಪ್ರಚಾರ ಮಾಡುವ ಬೇಂಗ ಚಕ್ಕೆಯ ಕಷಾಯ ಚಹ ಕಾಫಿಗಳ ಹುಚ್ಚನ್ನು ಇಳಿಸುವ ರುಚಿ ಉಳ್ಳದ್ದು.

ಇದರ ತೊಗಟೆ ಮತ್ತು ಒಳಮರಗಳಲ್ಲಿಯ ಕೆಂಪುಬಣ್ಣ ಜಾನಪದರ ಗಮನ ಸೆಳೆದಿತ್ತು. ಆದ್ದರಿಂದ ರಕ್ತ ಹೊನ್ನೆ, ನೆತ್ತರ ಹೊನ್ನೆ ಎಂದು ಇದನ್ನು ಗುರುತಿಸಿಕೊಂಡಿದ್ದರು. ಊರ ಹೊನ್ನೆ ಎಂದು ಗುರುತಿಸಿ ಕೊಂಡಿರುವ ಹೊನ್ನೆಕಾಯಿ ಮರಕ್ಕಿಂತ ಬೇರೆಯಾದ್ದರಿಂದ ಇದನ್ನು ಬೆಟ್‌ಹೊನ್ನೆಯೆಂದು ಕರೆದರು. ರಕ್ತ ಹೊನ್ನೆ ತನ್ನ ರಕ್ತದ ಬಣ್ಣದ ರಸದ ಕಾರಣದಿಂದ ಜನಪದ ಸಾಹಿತ್ಯದಲ್ಲಿ ಬರುವ ಅನೇಕ ಅಮಾಯಕರ ಜೀವ ಉಳಿಸಿದೆ.

ಜನಪದ ರಾಮಾಯಣದ ರಾಮ ತನ್ನ ಮೇಲೆ ಅಗಸನಿಂದ ಬಂದೊದಗಿದ ಕಳಂಕವನ್ನು ನೀಗಿಸಿಕೊಳ್ಳಲೆಂದು ತನ್ನ ತಮ್ಮ ಲಕ್ಷ್ಮಣನನ್ನು ಕರೆದು ತನ್ನ ಪತ್ನಿ ಸೀತೆಯನ್ನು ಕಾಡಿಗೆ ಕರೆದೊಯ್ದು ಅವಳ ತಲೆ ಕಡಿದು ಬಾ ಎಂದು ಆಜ್ಞೆ ಮಾಡುತ್ತಾನೆ. ಅಣ್ಣನ ಆಣತಿಯಂತೆ ಲಕ್ಷ್ಮಣ ಸೀತೆಯನ್ನು ಕಾಡಿಗೆ ಕರೆದೊಯ್ದು ಅವಳ ತಲೆ ಕಡಿಯಲೆಂದು ಖಡ್ಗವನ್ನೆತ್ತುತ್ತಾನೆ. ಆಗ ಖಡ್ಗದ ಮೇಲೆ ಅವಳಿ ಮಕ್ಕಳ ಹೊಳವು ಕಾಣುತ್ತದೆ. ಶಿಶುಹತ್ಯಾ ದೋಷ ತನಗೆ ತಗಲದಿರಲೆಂದು ಕೊಂಡು ಲಕ್ಷ್ಮಣ ಆ ಕಾರ್ಯವನ್ನು ಬಿಟ್ಟು ಸಮೀಪದಲ್ಲಿದ್ದ ರಕ್ತ ಹೊನ್ನೆ ಮರಕ್ಕೆ ಕಪ್ಪಿಡುತ್ತಾನೆ. ಆ ಕತ್ತಿಯನ್ನು ಅಣ್ಣನಲ್ಲಿಗೊಯ್ಯುತ್ತಾನೆ. ತಮ್ಮಾ ಸೀತೆಯನ್ನು ಕಡಿದೇ ಬಂದೆಯಾ? ನಿನಗೆ ಸೀತೆಯನ್ನು ಕಡಿಯಲು ಮನಸ್ಸಾದರೂ ಹೇಗೆ ಬಂತು? ಎಂದು ದುಃಖಿಸುತ್ತಾನೆ ರಾಮ. ಆಗ ಲಕ್ಷ್ಮಣ ಅಣ್ಣಾ ಇದು ರಾಜಾಜ್ಞೆಯಲ್ಲವೇ ನಾನು ತಪ್ಪು ಮಾಡುವೆನೇ? ನೋಡು ಕುರುಹು ತಂದಿದ್ದೇನೆ ಎಂದು ಹೇಳಿ ರಕ್ತಹೊನ್ನೆಯ ರಕ್ತ ಮೆತ್ತಿದ ಖಡ್ಗವನ್ನು ಅಣ್ಣನಿಗೆ ತೋರಿಸುತ್ತಾನೆ.

ಜನಪದ ಸಾಹಿತ್ಯದಲ್ಲಿ ತನ್ನ ಸವತಿಯ ಮಗನನ್ನು ಕೊಂದು ಅವನ ರಕ್ತವನ್ನು ತನ್ನ ಹಣೆಗೆ ಹಚ್ಚಬೇಕೆಂದು ಸತಾಯಿಸುವ ಕಿರಿಯ ಹೆಂಡತಿಯರ ಕಾಟದಿಂದ ತಪ್ಪಿಸಿಕೊಳ್ಳಲು ಅರಸ ಗಂಡಂದಿರು ಹಿರಿಯ ಹೆಂಡತಿಯ ಮಗನನ್ನು ಕಡಿಯಲು ಚಾಂಡಾಲರಿಗೆ ಆಜ್ಞೆ ಮಾಡಿದಾಗ ಕಾಡಿನಲ್ಲಿ ಆ ಮುದ್ದು ಮಗುವನ್ನು ಕಡಿಯಲಾರದೆ

ಚಾಂಡಾಲರು ಹೊನ್ನೆ ಮರದ ರಸ ತಂದು ಅರಸನಿಗೆ ಒಪ್ಪಿಸಿದಂತಹ ಸಂಗತಿಗಳ ಹಲವಾರು ವರ್ಣನೆಗಳು ಬರುತ್ತವೆ.

ಹೀಗೆ ಮರಗಳು ಜಾನಪದರ ಬದುಕಿನಲ್ಲಿ ಅವಿನಾಭಾವಿ ಸಂಬಂಧವನ್ನು ಹೊಂದಿರುವದಲ್ಲದೆ ಆ ಮರನಾಮಗಳು ಸ್ಥಳನಾಮ, ದೇವನಾಮ ಕುಲನಾಮಮತ್ತು ಮನುಷ್ಯರ ಅಂಕಿತನಾಮಗಳ ಅನ್ಯೋನ್ಯ ಸಂಬಂಧಗಳ ಅಧ್ಯಯನಕ್ಕೆ ಉತ್ತಮ ಆಕರಗಳಾಗಿವೆ. ಇವು ಮನುಷ್ಯ ಸಂಸ್ಕೃತಿ ಅಧ್ಯಯನ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಬಲ್ಲವು.

೩೦. ಈಗಾಗಲೇ ಕಂಡುಕೊಂಡಂತೆ ಜನಪದ ಸಂಸ್ಕೃತಿಯ ಅಧ್ಯಯನಕ್ಕೆ ಉತ್ತಮ ಸಾಮಗ್ರಿಯನ್ನು ಒದಗಿಸಬಲ್ಲ ಗಣಿಯಾಗಿರುವ ಜನಪದ ಸಸ್ಯನಾಮಗಳು ಒಂದು ಸಸ್ಯವನ್ನು ರಾಜ್ಯ ಮತ್ತು ದೇಶ ಮಟ್ಟದಲ್ಲಿ ಒಂದೇ ಹೆಸರಿನಿಂದ ಗುರುತಿಸಲು ತೊಡಕಾಗುವಷ್ಟು ಬಾಹುಳ್ಯವನ್ನು ಹೊಂದಿವೆಯಾದರೂ ಅವುಗಳನ್ನು ಅಳಿಯಲು ಬಿಡುವದು ಸಾಧುವಲ್ಲ. [ಹಲವಾರು ಕಾರಣಗಳಿಂದ ಪ್ರಮುಖವಾಗಿ ಆಧುನಿಕ ಸಂಪರ್ಕ ಸಾಧನಗಳ ವ್ಯವಸ್ಥೆ ಜನಪ್ರಿಯ ಅಗ್ಗದ ಬೆಲೆಯ ಔಷಧ ಪುಸ್ತಕಗಳಲ್ಲಿಯ ಒಂದು ಪ್ರದೇಶ ಅಥವಾ ಆಯುರ್ವೇದಕ್ಕೆ ಮೀಸಲಾದ ಹೆಸರುಗಳು ಬಹುಸಂಖ್ಯೆಯ ಪ್ರಾದೇಶಿಕ ಹೆಸರುಗಳಿಗೆ ಮುಳುವಾಗುತ್ತಿವೆ.] ಸಸ್ಯಶಾಸ್ತ್ರೀಯ ಹೆಸರುಗಳು ಅಧ್ಯಯನಕಾರರಿಗೆ ನೆರವಾಗುತ್ತದೆಯಾದರೂ ಅವು ಜನಸಾಮಾನ್ಯರ ನಾಲಿಗೆಗೆ ಹೊಂದುವದಿಲ್ಲ. ಆದ್ದರಿಂದ ಜನಪದ ಸಸ್ಯನಾಮಗಳನ್ನು ಅಧ್ಯಯನಕ್ಕೊಳಪಡಿಸಿ ದಾಖಲಿಸಿ ಬಳಿಕ ಕೆಲವನ್ನಾದರೂ ಸಾರ್ವತ್ರಿಕಗೊಳಿಸುವದು ಅವಶ್ಯವಾಗಿದೆ. ಹೊರ ದೇಶದಿಂದ ನಮ್ಮಲ್ಲಿಗೆ ವಲಸೆ ಬಂದ ಸ್ಟೀವಿಯ ಮತ್ತು ಇನ್ಸುಲಿನ್ ಗಿಡಗಳು ಸಸ್ಯಶಾಸ್ತ್ರೀಯ ಹೆಸರಿನ ಹಂಗಿಲ್ಲದೆ ದೇಶವ್ಯಾಪಿಯಾಗಿ ಗುರುತಿಸಲ್ಪಡುವದಕ್ಕೆ ಏನು ಕಾರಣವಾಯಿತೆಂಬುದನ್ನು ಗುರುತಿಸಿಕೊಳ್ಳಬೇಕು. ಕಾರಣವೇನೆಂದರೆ ಒಂದು ಗಿಡದ ಮೌಲ್ಯವು ದೇಶ ವ್ಯಾಪಿಯಾಗಿ ಒಂದು ಹೆಸರಿನೊಂದಿಗೆ ಪ್ರಚಾರಕ್ಕೆ ಬಂದಾಗ ಆ ಹೆಸರು ಜನಮನದಲ್ಲಿ ಇಳಿದುಬಿಡುತ್ತದೆ. ಈಗ

ಕೆಲವು ತಿಂಗಳ ಹಿಂದೆ ಜಗತ್ತಿನ ಮಟ್ಟದಲ್ಲಿ ಎಚ್೧ಎನ್೧ ಜ್ವರವು ಕಾಡಿದಾಗ ಅಮೃತ ಬಳ್ಳಿಯ ಹೆಸರು ನಮ್ಮ ದೇಶದ ಹಳ್ಳಿಹಳ್ಳಿಗೂ ಮುಟ್ಟಿದ್ದನ್ನು ನೆನಪಿಸಿಕೊಳ್ಳಬೇಕು. ಆದರೆ ಇದೇ ವೇಳೆಗೆ ಸಸ್ಯನಾಮಗಳ ಸಂದರ್ಭದಲ್ಲಿ ಚಿಕ್ಕ ದುರಂತವೊಂದು ನಡೆದುಹೋಯಿತು. ಎಚ್೧ಎನ್೧ ಜ್ವರವು ಅಮೃತ ಬಳ್ಳಿಯ ಕಷಾಯ ಕುಡಿಯುವದರಿಂದ ಕಡಿಮೆಯಾಗುತ್ತದೆಯೆಂಬ ಸುದ್ದಿ ಆಸ್ಥಾದಿಂದ ಹೊರ ಬಂದುದೇ ತಡ, ಆಯಾ ಊರಿನ ಸಮೀಪದ ಪೇಟೆಗೆ ಕಾಡಿನ ಮೂಲೆಮೂಲೆಗಳಿಂದ ಅಮೃತಬಳ್ಳಿ ಪೇಟೆಗೆ ಬಂತು. ಇದು ಅಮೃತ ಬಳ್ಳಿಯೇ ನಿಜ ಎಂದು ಸಾಕ್ಷೀಕರಿಸಲು ಹಳ್ಳಿಗರು ಅದರ ಎಲೆಸಮೇತ ಬಳ್ಳಿಯನ್ನು ಪೇಟೆಗೆ ತಂದರು. ಈ ಎರಡರ ಎಲೆಗಳು ಹೃದಯದಾಕಾರದವು ಅಂಕೋಲೆಯ ಪೇಟೆಯಲ್ಲಿ ಬೆಟ್ಟದಿಂದ ಬಂದ ಅಮೃತಬಳ್ಳಿಯದೇ ಕಾರುಬಾರು. ಇಲ್ಲಿಯ ಹಳ್ಳಿಗರಿಗೆ ಗೊತ್ತಿದ್ದದ್ದು ಒಂದು ದಪ್ಪ ತುಸು ಒರಟು. ಇನ್ನೊಂದು ನಯ ನಾಜೂಕು. ಓದಿದ ಕೆಲವರಿಗೆ ಪುಸ್ತಕದ ಚಿತ್ರದಲ್ಲಿ ಕಂಡ ನಾಡಿನ ನಾಜೂಕು ಅಮೃತಬಳ್ಳಿ ಗೊತ್ತಿತ್ತು. ಈ ನಾಜೂಕು ಮತ್ತು ತುಸು ಒರಟಾಗಿರುವ ಎಲೆ ಬಳ್ಳಿಗಳು ಸಂಸ್ಕೃತದ ಅಮೃತಬಳ್ಳಿಗಳೇ ಆಗಿವೆಯಾದರೂ ಇವೆರಡರ ಕುಟುಂಬ ಒಂದೇ ಆಗಿದ್ದರೂ ಇವೆರಡೂ ಕಾಡಿನಲ್ಲಿ ಲಭ್ಯವಾಗಿದ್ದರೂ, ಇವೆರಡೂ ಬೇರೆ ಬೇರೆ ಪ್ರಬೇಧಕ್ಕೆ ಸೇರಿದ್ದವು. ಇವೆರಡರ ಕುಟುಂಬವು ಮೆನಿಸ್ಪರಮೇಸಿ ಇದರ ಪ್ರಬೇಧಗಳಲ್ಲಿ ಒಂದರ ಹೆಸರು ಟೆನೊಸ್ಪೆರಾ ಕೊರ್ಡಿಫೊಲಿಯ ಇನ್ನೊಂದು ಟೆನೊಸ್ಪೆರಾ ಮಲಬಾರಿಕಾ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಪರಿಚಿತವಾಗಿರುವದು, ಈ ಮಲಬಾರಿಕಾ ಅಮೃತ ಬಳ್ಳಿ. ಉತ್ತರ ಕನ್ನಡವಷ್ಟೇ ಅಲ್ಲ ದಕ್ಷಿಣ ಭಾರತದ ನಾಡವೈದ್ಯರು ಈ ಮಲಬಾರಿಕಾ ಬಳ್ಳಿಯನ್ನೇ ಹೆಚ್ಚು ಬಲ್ಲರು

ಅವರು ಇದನ್ನು ತಿಪ್ಪತಿಗೆ ಬಳ್ಳಿಯೆಂದು ಗುರುತಿಸಿದರೆ ಉತ್ತರಕನ್ನಡದ (ದೆವ್ವನಿರೋಧಕ ಶಕ್ತಿಯನ್ನು ಹೊಂದಿದ ಈ ವಿದ್ಯೆಯಲ್ಲಿ ಪರಿಣತರಾದ) ದೆವ್ವ ಕಡಿಯುವಲ್ಲಿ ಸ್ಪೆಶಲಿಸ್ಟುಗಳಾದ ನೋಟಗಾರರು, ನಾಡವೈದ್ಯರು ಈ ಬಳ್ಳಿಯನ್ನು ದೆವ್ವ ಕಡಿಯುವ ಬಳ್ಳಿಯೆಂದು ಗುರುತಿಸುತ್ತಾರೆ.

ಅಂತರಾಳದಲ್ಲಿ ವಿಹರಿಸಬಲ್ಲ ಇದರ ಗುಣಲಕ್ಷಣವನ್ನು ಕಂಡ ಅನೇಕ ನಾಡವೈದ್ಯರು. ಮನೆಮದ್ದುಗಾರರು ಬೇರುನಾರು ತಜ್ಞರು ಇದನ್ನು ಅಂತರಟಿಗೆಬಳ್ಳಿಯೆಂದು ಗುರುತಿಸುತ್ತಿದ್ದಾರೆ. ಈ ಎಚ್೧ಎನ್೧ ಗಲಾಟೆ ನಡೆದ ಬಳಿಕ ತಿಂಗಳೆರಡು ತಿಂಗಳಲ್ಲಿ ಹಲವು ಮನೆಗಳ ಕೈದೋಟಗಳಲ್ಲಿ ಎರಡೂ ಬಗೆಯ ಅಮೃತ ಬಳ್ಳಿಗಳು ತಾಣ ಪಡೆದಿವೆ. ಇದು ಸಂತೋಷ. ಆದರೆ ಎರಡು ಅಮೃತ ಬಳ್ಳಿಗಳನ್ನು ಪ್ರತ್ಯೇಕವಾಗಿ ಗುರುತಿಸಲು ಸಾಧ್ಯವಾಗುವ ನಮ್ಮ ಜನಪದ ಸಸ್ಯನಾಮಗಳಿಗೆ ಕುತ್ತ ಬಂದಿತು. ಯಾಕೆಂದರೆ ಎರಡಕ್ಕೂ ಒಂದೇ ಹೆಸರು ರೂಢಿಗೆ ಬರುತ್ತಿದೆ

ಅಮೃತ ಬಳ್ಳಿ ಮತ್ತು ಅದರ ದಾಯಾದಿಯಾದ ದೆವ್ವಕಡಿಯುವ ಬಳ್ಳಿಗಳು ಅದ್ಭುತ ಜೀವಶಕ್ತಿಯನ್ನು ಪಡೆದ ಬಳ್ಳಿಗಳಾಗಿವೆ. ಎಲ್ಲಾದರೂ ಚಲ್ಲು ಎಲ್ಲಾದರೂ ಬಿಡು. ಬದುಕಿಬರುವೆನೆಂಬ ಚಲ ಇವುಗಳದ್ದು. ಅಮೃತ ಬಳ್ಳಿಯ ಚಲ ಇನ್ನೂ ಮೇಲ್ಮಟ್ಟದ್ದು ಎಂದು ಕೊಂಡಿದ್ದೇನೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನನ್ನ ಅನುಭವದ ಸೀಮೆಯಲ್ಲಿ ಅದರ ಬದುಕುವ ಚಲದ ದಾಖಲೆಯನ್ನು ಕಂಡೆ. ಹೊನ್ನಾವರದ ಕರ್ಕಿಯ ಚನ್ನಕೇಶವ ಇಂಗ್ಲಿಷ್ ಶಾಲೆಯ ಹಿಂದಿರುವ ಅಶ್ವತ್ತಮರದ ತುದಿಯನ್ನೇರಿ ಕುಳಿತ, ಇದರ ಅಲ್ಲಿನ ಇರವು ಕಂಡದ್ದು ಅದು ಅಷ್ಟೆತ್ತರದ ತುದಿಯಿಂದ ಇಳಿಬಿಟ್ಟ ಮುತ್ತಿನ ಬಣ್ಣದ, ಶಾಲೆಯಲ್ಲಿ ಉತ್ತರ ಪತ್ರಿಕೆಯನ್ನು ಸುತ್ತಿ ಕಟ್ಟುತ್ತಿದ್ದವರ ಮೇಜಿನ ಮೇಲೆ ಕಂಡ ಟಾಯ್ನ್ ದಾರದಷ್ಟು ಗಡುತರದ ಅಲ್ಲಿಂದಿಲ್ಲಿಗೂ ಅದೇ ಗಡುತರವನ್ನು ಕಾಯ್ದುಕೊಂಡು, ನೆಲ ಮುಟ್ಟಲು ಯಾವುದೇ ಹರಸಾಹಸ ಕೈಗೊಳ್ಳದೆ ಲೀಲಾಜಾಲವಾಗಿ ನೆಲದ ದಿಕ್ಕಿಗಿಳಿಯುತ್ತಿರುವ ಸುಮಾರು ಇನ್ನೂರು ಅಡಿಯ ಅಂತರಟಿಗೆಯ ಬಳ್ಳಿಯ ಬೇರನ್ನು ಕಂಡೆ. ಧನ್ಯವೆನಿಸಿತು ಜೀವಕ್ಕೆ. ದುಡ್ಡು ಕೊಟ್ಟಿಲ್ಲ ದುಗ್ಗಾಣಿಯ ಖರ್ಚಿಲ್ಲ. ಅರಣ್ಯ ಇಲಾಖೆಯ ಯಾ ಸರಕಾರದ ಜೀಪಿನ ಹಂಗಿಲ್ಲ. ಬೊಟ್ನಿ ಅಧ್ಯಯನ ತಂಡ ಬಳಿಯಿಲ್ಲ. ಕಾಡನ್ನು ಸುತ್ತಲಿಲ್ಲ. ಪೇಟೆಯ ಸಮೀಪದ ಈ ಊರಿನಲ್ಲಿ ಇದರ ದರ್ಶನವಾಯಿತು. ಅದರ ಬುಡವನ್ನು ಹುಡುಕಿದೆ, ಕಾಣಲಿಲ್ಲ. ಬುಡವೇ ಕಿತ್ತು ಹೋದರೂ ಬದುಕುವ ಇದರ ಪರಿಯನ್ನು ಹಲವು

ಕಡೆ ನೋಡಿದೆ. ನಿನ್ನ ಈ ಅದ್ಭುತ ಶಕ್ತಿಯನ್ನು ಸರ್ವ ಜೀವಿಗಳಿಗೂ ಕೊಡು ಎಂದು ನಾನು ಬೇಡಿಕೊಳ್ಳಲಿಲ್ಲ. ನಿನ್ನಂತೆ ಚಲಬಿಡದೆ ತನಗಾಗಿ, ಅನ್ಯರಿಗಾಗಿ ಬದುಕುವದನ್ನು ನಿನ್ನನ್ನು ನೋಡಿ ಜನ ಕಲಿಯಲಿ ಎಂದುಕೊಂಡೆ. ಬುಡವಿಲ್ಲದಿದ್ದರೇನಾಯ್ತು. ತನ್ನ ಆಗಂತುಕ ಬೇರನ್ನು ಎಲ್ಲೆಲ್ಲೋ ಇಳಿಸಿ ಬದುಕುತ್ತದೆ, ಅದೇನು ಮಹಾ ಎಂದಾರು ಸಸ್ಯತಜ್ಞರು. ಅದು ಒತ್ತಟ್ಟಿಗಿರಲಿ. ಇದು ಸಾವಿಲ್ಲದ ಬಳ್ಳಿಯೆಂದೋ ರೋಗಿಗಳಿಗೆ. ಅಮೃತ ನೀಡುವ ಬಳ್ಳಿಯೆಂಬ ಕಾರಣದಿಂದಲೋ ಅಮೃತ ಬಳ್ಳಿ ಎಂದು ಇದನ್ನು ಬಲ್ಲವರು ಶ್ಲಾಘಿಸಿದ್ದನ್ನು ಮರೆಯುವಂತಿಲ್ಲ.

ಈಗಾಗಲೇ ತಿಳಿಸಿದಂತೆ ಸಾವಿರಾರು ಸಸ್ಯನಾಮಗಳು ಹಳೆಯ ಹಲವು ಶಾಸ್ತ್ರಾದಿ ಗ್ರಂಥಗಳಲ್ಲಿ ದೊರೆಯುತ್ತಿದ್ದು ಅವುಗಳಲ್ಲಿ ಹಲವು ತಮ್ಮ ಅರ್ಥ ಕಳೆದುಕೊಂಡಿವೆ. ಅವುಗಳ ಪರಿಚಯ ಸಾಧ್ಯವಾಗುತ್ತಿಲ್ಲ. [ಆದರೆ ಜಗತ್ತಿನ ಹಾಗೂ ನಮ್ಮ ದೇಶದ ಮೂಲೆಮೂಲೆಗಳಲ್ಲಿ ಸಸ್ಯಗಳ ಅನನ್ಯತೆಯನ್ನು ಗುರುತಿಸಬಲ್ಲಂತಹ ಜಾನಪದರ ನಡುವೆ ಸಾವಿರ ಸಾವಿರ ಸಸ್ಯನಾಮಗಳು ಆಯಾ ಪ್ರಾದೇಶಿಕ ಭಾಷೆಯಲ್ಲಿ ಅಸ್ತಿತ್ವದಲ್ಲಿದೆ. ಅವುಗಳ ಅಧ್ಯಯನವು ತೀವ್ರ ಗತಿಯಲ್ಲಿ ಆಗಬೇಕಾದದ್ದು ಹಲವಾರು ಕಾರಣಗಳಿಂದ ಅನಿವಾರ್ಯವಾಗಿದೆ. ಈ ಸಾವಿರ ಸಾವಿರ ಹೆಸರುಗಳನ್ನು ಸಂಗ್ರಹಿಸುವುದು ಯಾವಾಗ? ಕೇವಲ ಯಾದಿ ತಯಾರಿಸಿದರೆ ಸಾಕೆ? ಇದು ಒಂದು ಕಳೆ. ಇದು ಒಂದು ಔಷಧ ಗಿಡ. ಇದು ಕಾಡಿನ ಆಹಾರ ಸಸ್ಯ. ಈ ಒಣ ದಾಖಲೆಗಳು ಸಾಕೆ? ಈ ಪದ್ಧತಿಯ ದಾಖಲೆ ಅವಕ್ಕೆ ಕಲ್ಲು ಹರಳಿನ ಸ್ಥಾನವನ್ನು ನೀಡುವದಲ್ಲದೆ ಮತ್ತೇನನ್ನು ಸಾಧಿಸಬಲ್ಲವು? ಇವುಗಳ ಅರ್ಹ ದಾಖಲೀಕರಣಕ್ಕೆ ಹಣಬಲ, ಜನಬಲಗಳ ಕೊರತೆಯೆಂಬುದು ಕುಂಟು ನೆವವಾದೀತು ಹಾಗಾಗಬಾರದು. ಇದು ತಿರುಪತಿ ತಿಮ್ಮಪ್ಪನ ಕೆಲಸವೆಂದು ತಿಳಿದು ಕೋಟಿದಾನಿಗಳು ಮುಂದೆ ಬರಬೇಕು. ಭಕ್ತರು ಕೋಟಿ ಗಿಡಮರ ಬಳ್ಳಿಗಳ ಮುಂದೆ ನಿಂತು ಕೋಟಿ ನೀಡಿ ನಮಸ್ಕಾರ ಮಾಡಬೇಕು. ತಿರುಪತಿ ತಿಮ್ಮಪ್ಪ ಮನುಷ್ಯ ಇದ್ದಷ್ಟು ಕಾಲ ಅಜರಾಮರ. ಆದರೆ ಈ ಸಸ್ಯನಾಮವನ್ನೊಳಗೊಂಡ ಗಿಡಮರ ಬಳ್ಳಿಗಳ ಜ್ಞಾನ; ಅವುಗಳ

ಜಾನಪದ; ಅಜರಾಮರವಲ್ಲ. ಈ ಜಾನಪದ ಈ ಜ್ಞಾನನಿಧಿ ಆಯಾ ಜಾನಪದರ ಜೊತೆ ನೆಲದಲ್ಲಿ ಹೂಳಿ ಹೋಗುತ್ತದೆ. ತಿರುಪತಿ ತಿಮ್ಮಪ್ಪನೇ ಈ ಕೆಲಸಕ್ಕೆ ಕೈ ಹಾಕಿದರೆ ತಪ್ಪಲ್ಲ. ಏಕೆಂದರೆ ಮನುಷ್ಯ ಬಾಳಿದರೆ ಆತ ಬಾಳಿಯಾನು. ಮನುಷ್ಯರೇ ಇಲ್ಲದ ಮೇಲೆ ಅವನಿಗೆಲ್ಲಿಯ ಉಳಿವು? ಭೂಮಿಯ ಮೇಲೆ ಗಿಡಮರ ಬಳ್ಳಿಗಳು ಬಾಳಿ ಬದುಕಿದರೆ ಮನುಷ್ಯರ ಉಳಿವು, ಅಲ್ಲವೇ? ಅಂದರೆ ತಿರುಪತಿ ತಿಮ್ಮಪ್ಪನ ಉಳಿವಿಗೆ ಈ ಗಿಡ ಮರಗಳ ಬಳ್ಳಿಗಳ ಉಳಿವು ಬೇಕು.] ಇಂದಿನವರಿಗಾಗಿ ಮುಂದಿನವರಿಗಾಗಿ ಇವುಗಳನ್ನು ಉಳಿಸಬೇಕು; ಇವುಗಳನ್ನು ಮಕ್ಕಳಂತೆ ಪೋಷಿಸಿ ಉಳಿಸಿ ಅಧ್ಯಯನ ಮಾಡಬೇಕು. ಈ ಹೆಸರುಗಳ ಬಾಲ ಹಿಡಿದು ಹುಡುಕಿ ಹೊರಡಬೇಕು. ಜನಪದ ಮೂಲಿಕಾ ತಜ್ಞರ ಜೊತೆಗೆ ಸಸ್ಯಶಾಸ್ತ್ರಜ್ಞರ ನೆರವು ಹೆಜ್ಜೆಹೆಜ್ಜೆಗೂ ಬೇಕು.

ಇನ್ನೊಂದು ವಿಷಯ ಗೊತ್ತೆ? ಕನ್ನಡದಲ್ಲಿಯೂ ಆಯುರ್ವೇದಗಳಿವೆ. ಇವುಗಳಲ್ಲಿ ಚಾವುಂಡರಾಯನ ಲೋಕೋಪಕಾರ ಕಳಲೆ ವೀರರಾಜೇಂದ್ರನ ಸಕಲವೈದ್ಯಸಂಹಿತಾ ಸಾರಾರ್ಣವ, ಬೊಮ್ಮಯ್ಯನ ವೈದ್ಯಕಂದ ಮಂಗರಾಜನ ಖಗೇಂದ್ರ ಮಣಿ ದರ್ಪಣಗಳು ಬೆಳಕು ಕಂಡಿವೆ. ಖಗೇಂದ್ರ ಮಣಿದರ್ಪಣದಲ್ಲಿಯ ಸಸ್ಯನಾಮಗಳಿಗೆ ಡಾ.ಸತ್ಯನಾರಾಯಣಭಟ್ ಸಸ್ಯಶಾಸ್ತ್ರೀಯ ಹೆಸರನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಜಗದ್ದಳ ಸೋಮನಾಥನ ಕರ್ಣಾಟಕ ಕಲ್ಯಾಣ ಕಾರಕ, ಶ್ರೀಧರ ದೇವನ ವೈದ್ಯಾಮೃತ. ಸಾಳ್ವ ಸಾಂಗತ್ಯ ಮುಂತಾದ ಕನ್ನಡ ಆಯುರ್ವೇದ ಗ್ರಂಥಗಳಲ್ಲದೆ ಸಂಸ್ಕೃತ ಆಯುರ್ವೇದ ಗ್ರಂಥಗಳಿಗೆ ಕನ್ನಡದಲ್ಲಿ ಬರೆದ ಟೀಕು ಟಿಪ್ಪಣಿಗಳು ದೊರೆಯುತ್ತವೆ. ಇವುಗಳಲ್ಲಿ ಅಚ್ಚಗನ್ನಡ ಸಸ್ಯನಾಮಗಳಿವೆ. ಇವುಗಳಲ್ಲಿ ಜನಪದ ವೈದ್ಯಜ್ಞಾನವು ದಾಖಲಾಗಿದೆ. ಇದನ್ನು ಮನಗಾಣಬೇಕು. ಸಂಸ್ಕೃತ ಆಯುರ್ವೇದ ವಿದ್ಯಾರ್ಥಿಗಳು ಈ ಆಯುರ್ವೇದವನ್ನೂ ಕಲಿಯುವಂತಾಗಬೇಕು.

ಸಂಸ್ಕೃತ ಆಯುರ್ವೇದವೊಂದೇ ನಮ್ಮ ದೇಶದ ಸಂಪತ್ತಲ್ಲ. ಸಿದ್ಧ ಯುನಾನಿಗಳೂ ಬೇಕು ಕನ್ನಡ ಆಯುರ್ವೇದವೂ ಬೇಕು ಅವುಗಳ ಜೊತೆಗೆ ಜನಪದ ವೈದ್ಯವೂ ಬೇಕು.

ಇದು ಹಲವು ವೈದ್ಯಗಳ ತೌಲನಿಕ ಅಧ್ಯಯನಕ್ಕೆ ಪರ್ವಕಾಲ. ಈ ವೈದ್ಯ ಗಂಗೆ ಜನಸಾಮಾನ್ಯನ ಮನೆತನಕ ಹರಿಯುವ ಅನಿವಾರ್ಯತೆಯಿದೆ. ಅದಕ್ಕೆ ತಕ್ಕ ಏರ್ಪಾಟಾಗಬೇಕಾಗಿದೆ. ಆಯುರ್ವೇದಗಳಾದಿಯಾಗಿ ಹಲವು ವೈದ್ಯಗಳ ತಾಯಿ ಜನಪದವೈದ್ಯ ನಮ್ಮ ಹೆಮ್ಮೆಯ ಸಂಪತ್ತಾಗಿ ನಮ್ಮ ಸುತ್ತ ಅಸ್ತಿತ್ವದಲ್ಲಿದೆ. ಇದನ್ನು ಕಳೆದುಕೊಳ್ಳದೆ ಇದರಲ್ಲಿರುವ ಸಸ್ಯನಾಮದ ಜೊತೆಗೆ ಇತರ ಜನಪದ ಸಸ್ಯನಾಮಗಳನ್ನು ಅವು ನೀಡುವ ಜ್ಞಾನವನ್ನು ಸಂಗ್ರಹಿಸಿ ಇಡಿಯಾಗಿ ಅಧ್ಯಯನ ಮಾಡಿ ಚಿತ್ರಮತ್ತು ಸಸ್ಯಶಾಸ್ತ್ರೀಯ ಹೆಸರುಗಳೊಂದಿಗೆ ಸುಲಭ ಕನ್ನಡದಲ್ಲಿ ಹಾಗೂ ಸಾಧ್ಯವಾದರೆ ಇಂಗ್ಲಿಷಿನಲ್ಲಿಯೂ ದಾಖಲಿಸಿದರೆ ನಮ್ಮ ಪರಂಪರಾಗತ ಸಸ್ಯಸಂಪತ್ತಿನ ಜ್ಞಾನಕ್ಕೆ ಜಗದಗಲ ಬೆಲೆ ಬರುವದರಲ್ಲಿ ಸಂದೇಹವಿಲ್ಲ.

ಜನಪದ ಸಸ್ಯನಾಮಗಳ ಅಧ್ಯಯನವು ಕನ್ನಡ ಜಾನಪದ ಕ್ಷೇತ್ರಕ್ಕೆ ಹೊಚ್ಚ ಹೊಸತು. ಕನ್ನೆನೆಲವಾಗಿ ಉಳಿದಿದ್ದ ಈ ಕ್ಷೇತ್ರವನ್ನು ಪ್ರವೇಶಿಸಿರುವ ಜಾನಪದ ವಿದ್ವಾಂಸರಾದ ಶ್ರೀಮತಿ ಶಾಂತಿನಾಯಕ ಅವರು ಸಸ್ಯನಾಮಗಳನ್ನು ಕುರಿತಾದ ಕಿರುಹೊತ್ತಿಗೆಯನ್ನು ರಚಿಸುವುದರ ಮೂಲಕ ಅನನ್ಯವಾದ ಕೊಡುಗೆ ನೀಡಿದ್ದಾರೆ. ಸಸ್ಯಸಂಬಂಧಿ ವಿಚಾರಗಳನ್ನು ಅತ್ಯಂತ ಸರಳವಾಗಿ, ಸ್ಪಷ್ಟವಾಗಿ ಓದುಗರ ಮನ ಮುಟ್ಟುವಂತೆ ತಲುಪಿಸುವಲ್ಲಿ ಶಾಂತಿ ನಾಯಕರಿಗೆ ಭಾಷೆ ಸಿದ್ಧಿಸಿದೆ. ವಿಷಯ ಮಂಡನೆಯಲ್ಲಿ ಆಪ್ತತೆ ಇದೆ. ಜನಪದ ಸಸ್ಯನಾಮಗಳ ದಾಖಲೀಕರಣ ಮತ್ತು ಅಧ್ಯಯನದಿಂದ ಆಯುರ್ವೇದ ವಿದ್ಯಾರ್ಥಿಗಳಿಗೆ ಮತ್ತು ವೈದ್ಯರುಗಳಿಗೆ ಹೆಚ್ಚಿನ ಪ್ರಯೋಜನ ಲಭಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

– **ಡಾ. ಚಕ್ಕೆರೆ ಶಿವಶಂಕರ್**

ಕರ್ನಾಟಕ ಜಾನಪದ ಪರಿಷತ್ತು

ನಂ.1, ಜಲದರ್ಶಿನಿ ಬಡಾವಣೆ
ಎಂ.ಎಸ್.ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್.ರಸ್ತೆ, ಬೆಂಗಳೂರು–560054